ಕರ್ನಾಟಕ ಉಚ್ಚ ನ್ಯಾಯಾಲಯ

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಶ್ರೀನಿವಾಸ್ ಹರೀಶ್ ಕುಮಾರ್ ಮತ್ತು ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೇಮಂತ್ ಚಂದನಗೌಡರ್

ವೆಂಕಟ್ -ವಿರುದ್ಧ-ಅನಿತಾ ಮತ್ತು ಇತರರು

ಆರ್.ಎಫ್.ಎ.ಸಂಖ್ಯೆ: 6041/2013, ದಿನಾಂಕ 17 ನೇ ಸೆಂಬರ್, 20

ತೀರ್ಪು

ನ್ಯಾಯಮೂರ್ತಿ ಶ್ರೀ ಶ್ರೀನಿವಾಸ್ ಹರೀಶ್ ಕುಮಾರ್:

ಭಾಲ್ಕಿಯ ಹಿರಿಯ ಸಿವಿಲ್ ನ್ಯಾಯಾಧೀಶರ ಕಡತದಲ್ಲಿನ ಮೂಲ ದಾವೆಸಂಖ್ಯೆ: 13/2011 ರಲ್ಲಿನ ಎರಡನೇ ಪ್ರತಿವಾದಿಯು, ವಿಭಜನೆಗೆ ಸಂಬಂಧಿಸಿದಂತೆ ಸದರಿ ದಾವೆಯಲ್ಲಿ ಹೊರಡಿಸಿದ ತೀರ್ಪನ್ನು ಪ್ರಶ್ನಿಸಿ ಈ ಅಪೀಲನ್ನು ಸಲ್ಲಿಸಿದ್ದಾರೆ.

2. 1 ರಿಂದ 4 ರವರೆಗಿನ ವಾದಿಗಳು, 1 ರಿಂದ 4 ನೇ ಪ್ರತಿವಾದಿಗಳ ಹೆಣ್ಣು ಮಕ್ಕಳಾಗಿದ್ದಾರೆ.ಎರಡನೇ ಮತ್ತು ಮೂರನೇ ಪ್ರತಿವಾದಿಗಳು, 1 ನೇ ಮತ್ತು 4 ನೇ ಪ್ರತಿವಾದಿಗಳ ಗಂಡು ಮಕ್ಕಳು.ವಾದಿಯ ಮೊಕದ್ದಮೆ ಏನೆಂದರೆ, ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಮೇಖರ್ ಗ್ರಾಮದಲ್ಲಿ ಇರುವ ಸರ್ವೆ ಸಂಖ್ಯೆ 44 ರಲ್ಲಿರುವ 21 ಎಕರೆಗಳ ಜಮೀನು ಮತ್ತು 4-130 ಮತ್ತು 4-131 ಸಂಖ್ಯೆಗಳನ್ನು ಹೊಂದಿರುವ ಎರಡು ಮನೆಗಳು ಅವರ ಪಿತ್ರಾರ್ಜಿತ ಆಸ್ತಿಯಾಗಿವೆ; ಅವರಲ್ಲಿ ಪ್ರತಿಯೊಬ್ಬರೂ ಕಾನೂನುಸಮ್ಮತ ಪಾಲಿಗೆ ಹಕ್ಕುಳ್ಳವರಾಗಿದ್ದಾರೆ.1 ರಿಂದ 3 ರವರೆಗಿನ ಪ್ರತಿವಾದಿಗಳು,ದಿನಾಂಕ: 29.06.2000 ದಂದು ತಮ್ಮ ತಮ್ಮೊಳಗೆ ವಿಭಜನೆ ಪತ್ರವನ್ನು ಸೃಜಿಸಿಕೊಂಡಿದ್ದಾರೆ.ವಾದಿಗಳು ಸದರಿ ವಿಭಜನಾ ಪತ್ರಕ್ಕೆ ಪಕ್ಷಕಾರರಾಗಿರಲಿಲ್ಲ.ಆ ತರುವಾಯ, ಎರಡನೇ ಪ್ರತಿವಾದಿಯು, ಸದರಿ ವಿಭಜನೆ ಪತ್ರವನ್ನಾಧರಿಸಿ, ಸ್ವಾಮ್ಯ ಮತ್ತು ನಿರ್ಬಂಧಕಾಜ್ಞೆಯ ಘೋಷಣೆಯ ಪರಿಹಾರಕ್ಕಾಗಿ ಭಾಲ್ಕಿಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಮೂಲ ದಾವೆಸಂಖ್ಯೆ: 54/2004 ರಲ್ಲಿ ದಾವೆಯನ್ನು ಹೂಡಿದ್ದರು.ದಿನಾಂಕ: 26.11.2009 ರಂದು ಸದರಿ ದಾವೆಯನ್ನು ಡಿಗ್ರಿಗೊಳಿಸಲಾಗಿತ್ತಾದರೂ, ವಿಭಜನೆಯನ್ನು ಪುನರಾರಂಭಿಸುವ ಮೂಲಕ ಸೂಕ್ತ ರೀತಿಯಲ್ಲಿ ಅವರ ಪಾಲನ್ನು ಕ್ಲೇಮು ಮಾಡಲು ವಾದಿಗಳಿಗೆ ಸ್ವಾತಂತ್ರ್ಯ ನೀಡಲಾಗಿತ್ತು.ಆದುದರಿಂದ, ಅವರು ವಿಭಜನೆಗಾಗಿ ದಾವೆಯನ್ನು ಹೂಡಿದ್ದಾರೆ.

3. ಎರಡನೇ ಪ್ರತಿವಾದಿಯು ತನ್ನ ಲಿಖಿತ ಹೇಳಿಕೆಯಲ್ಲಿ, ವಾದಿಗಳು ತಮ್ಮ ಮೊದಲಿನ ದಾವೆಗಳಾದ ಮೂಲ ದಾವೆಸಂಖ್ಯೆ: 39/2003 ರಿಂದ ಮೂಲ ದಾವೆಸಂಖ್ಯೆ: 43/2003 ರಲ್ಲಿ ವಿಭಜನೆ ಬಗ್ಗೆ ಸ್ವತಃ ಒಪ್ಪಿಕೊಂಡಿರುವಂತೆ, ೧ ವಿಭಜನೆ ಕೋರುವ ಹಕ್ಕನ್ನು ಅವರು ಹೊಂದಿರುವುದಿಲ್ಲ; ಸದರಿ ದಾವೆಗಳಲ್ಲಿನ ಡಿಗ್ರಿಗಳೆಲ್ಲವೂ ಒಳಸಂಚಿನಿಂದ ಕೂಡಿದ್ದವು; ಅವರು ಮೂಲ ದಾವೆಸಂಖ್ಯೆ: 54/2004 ರಲ್ಲಿನ ತೀರ್ಪು ಮತ್ತು ಡಿಗ್ರಿಯ ಅನುಚಿತ ಪ್ರಯೋಜನ ಪಡೆಯಲಾಗುವುದಿಲ್ಲ ಎಂದು ವಾದಿಸಿದ್ದಾರೆ.ಇದಲ್ಲದೆ ಅವರು,ದಿನಾಂಕ: 29.06.2000 ದಂದು ನಡೆದ ವಿಭಜನೆಯ ಸಮಯದಲ್ಲಿ, 1 ರಿಂದ 3 ರವರೆಗಿನ ಪ್ರತಿವಾದಿಗಳು, ವಾದಿಗಳ ವಿವಾಹ ನೆರವೇರಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರಾದ್ದರಿಂದ, ವಾದಿಗಳು ( 1 ರಿಂದ 3 ರವರೆಗಿನ ಪ್ರತಿವಾದಿಗಳು) ತಮ್ಮ ಸ್ವತ್ತಿನಲ್ಲಿನ ಅವರ ಪಾಲನ್ನು ಬಿಟ್ಟುಕೊಟ್ಟಿದ್ದರು; ವಾಸ್ತವವಾಗಿ ತಾನು ವಿವಾಹ ನೆರವೇರಿಸಿದ್ದೇನೆ, ವಿಭಜನೆ ಪತ್ರವನ್ನು ಅವರ ಗ್ರಾಮದಲ್ಲಿದ್ದ ಜವಾಬ್ದಾರಿಯುತ ವ್ಯಕ್ತಿಗಳ ಸಮ್ಮುಖದಲ್ಲಿ ಬರೆಯಲಾಗಿತ್ತು; ಸದರಿ ವಿಭಜನೆಯ ನಂತರ ವಾದಿಗಳು ಮೊದಲನೇ ಪ್ರತಿವಾದಿಯೊಂದಿಗೆ ಶಾಮೀಲಾಗಿದ್ದಾರೆ ಮತ್ತು ನಂತರ ಮೂಲ ದಾವೆಸಂಖ್ಯೆ: 39/2003 ರಿಂದ ಮೂಲ ದಾವೆಸಂಖ್ಯೆ: 43/2003 ರವರೆಗಿನ ದಾವೆಗಳನ್ನು ಹೂಡಿದ್ದಾರೆ; ಸದರಿ ದಾವೆಗಳಲ್ಲಿನ ತೀರ್ಪುಗಳು ತನಗೆ ಬಂಧನಕಾರಿಯಲ್ಲ ಮತ್ತು ವಾಸ್ತವವಾಗಿ, ಮೂಲ ದಾವೆಸಂಖ್ಯೆ: 54/2004 ರಲ್ಲಿನ ತೀರ್ಪಿನಲ್ಲಿ, ಸದರಿ ದಾವೆಗಳಲ್ಲಿನ ತೀರ್ಪುಗಳು ತನ್ನ ಹಿತಾಸಕ್ತಿಗೆ ಬಂಧನಕಾರಿಯಲ್ಲ; ಆದುದರಿಂದ, ವಾದಿಗಳು ವಿಭಜನೆಗೆ ಕ್ಲೇಮು ಮಾಡಲಾಗುವುದಿಲ್ಲ ಮತ್ತು ದಾವೆಯನ್ನು ವಜಾಗೊಳಿಸಬೇಕೆಂದು ಹೇಳಿದ್ದಾರೆ.

4. ಅಧಿವಿಚಾರಣಾ ನ್ಯಾಯಾಲಯವು ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಹಾಗೂ ಪ್ರತಿಯೊಬ್ಬ ವಾದಿಯು ದಾವಾ ಸ್ವತ್ತುಗಳಲ್ಲಿ 1/ 8 ರಷ್ಟು ಪಾಲಿಗೆ ಹಕ್ಕುಳ್ಳವರಾಗಿದ್ದಾರೆ ಎಂದು ಘೋಷಿಸಿದ ದಾವೆಯನ್ನು ವಿಶ್ಲೇಷಿಸಿದೆ ಮತ್ತು ಅದರಿಂದ ಎರಡನೇ ಪ್ರತಿವಾದಿಯು ಈ ಅಪೀಲನ್ನು ಸಲ್ಲಿಸಿದ್ದಾರೆ.

5. ಅಪೀಲುದಾರ-ಎರಡನೇ ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಗಳು ಎರಡನೇ ಪ್ರತಿವಾದಿಯ ಸ್ವಾಮ್ಯಕ್ಕೆ ಸಂಬಂಧಿಸಿದಂತೆ ಮೂಲ ದಾವೆಸಂಖ್ಯೆ: 54/2004 ರಲ್ಲಿ ನೀಡಿದ ನಿರ್ಣಯಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ದಾವೆಯನ್ನು ಡಿಗ್ರಿಗೊಳಿಸಿರುವಲ್ಲಿ ಅಧಿವಿಚಾರಣಾ ನ್ಯಾಯಾಲಯವು ಸ್ಪಷ್ಟವಾಗಿ ತಪ್ಪನ್ನೆಸಗಿದೆ ಎಂದು ವಾದಿಸಿದ್ದಾರೆ.ಮುಂದುವರೆಸುತ್ತಾ, ಸದರಿ ದಾವೆಯು ಸ್ವಾಮ್ಯದ ಘೋಷಣೆಗೆ ಸಂಬಂಧಿಸಿತ್ತು, ಅದರಲ್ಲಿ ವಾದಿಯಾಗಿರುವ ಎರಡನೇ ಪ್ರತಿವಾದಿಯ ಸ್ವಾಮ್ಯಕ್ಕೆ ಸಂಬಂಧಿಸಿದಂತೆ ಸದರಿ ದಾವೆಯಲ್ಲಿನ ಮೊದಲ ವಿವಾದಕ್ಕೆ ಸಂಬಂಧಿಸಿದಂತೆದಿನಾಂಕ: 29.06.2000 ರಂದು ವಿಭಜನೆಯನ್ನು ಸಕಾರಾತ್ಮಕವಾಗಿ ಎತ್ತಿಹಿಡಿದು ಉತ್ತರಿಸಲಾಗಿದೆ ಎಂದು ವಾದಿಸಿದ್ದಾರೆ.ಈ ತೀರ್ಪನ್ನು ವಾದಿಗಳು ಪ್ರಶ್ನಿಸಿರುವುದಿಲ್ಲ; ಅದು ಅಂತಿಮತೆಯನ್ನು ತಲುಪಿರುವುದರಿಂದ, ಅಧಿವಿಚಾರಣಾ ನ್ಯಾಯಾಲಯವು ವಿಭಜನೆಯನ್ನು ಪುನರಾರಂಭಿಸಬಾರದಿತ್ತು; ನ್ಯಾಯಾಲಯವು, ಮೂಲ ದಾವೆಸಂಖ್ಯೆ: 54/2004 ನ್ನು ನಿರ್ಧರಿಸುವಾಗ, ವಾದಿಗಳು ವಿಭಜನೆಯನ್ನು ಪುನರಾರಂಭಿಸಲು ದಾವೆಯನ್ನು ಹೂಡಬಹುದು ಎಂದು ಅಭಿಪ್ರಾಯಪಟ್ಟಿದ್ದರೂ, ಆ ಅಭಿಪ್ರಾಯವು ವಿವಾದಸಂಖ್ಯೆ: 1 ನ್ನು ಕುರಿತ ನಿರ್ಣಯಕ್ಕೆ ವಿರುದ್ಧವಾಗಿತ್ತು ಹಾಗೂ ಈ ಒಂದೇ ಕಾರಣಕ್ಕಾಗಿ ಅಧಿವಿಚಾರಣಾ ನ್ಯಾಯಾಲಯವು ದಾವೆಯನ್ನು ವಜಾಗೊಳಿಸಿತ್ತು ಎಂದು ವಾದಿಸಿದ್ದಾರೆ.

6. ಅಪೀಲುದಾರ ರ ಮಾನ್ಯ ನ್ಯಾಯವಾದಿಗಳು ಪರ ನಿವೇದಿಸಿಕೊಂಡಿರುವುದೇನೆಂದರೆ, ವಿಭಜನೆಯನ್ನು ಪುನರಾರಂಭಿಸುವುದು ಸಾಧ್ಯವಿದೆ ಮತ್ತು ಎಲ್ಲಾ ಸ್ವತ್ತುಗಳನ್ನು ಸಂಯೋಜಿಸಿದಾಗ ಮಾತ್ರ ಅದಕ್ಕೆ ಅನುಮತಿ ನೀಡಲಾಗುತ್ತದೆ.ಈ ಮೊಕದ್ದಮೆಯಲ್ಲಿ,ದಿನಾಂಕ: 29.06.2000 ದ ವಿಭಜನೆಯ ಮತ್ತು ಮೂಲ ದಾವೆಸಂಖ್ಯೆ: 54/2004 ರಲ್ಲಿನ ತೀರ್ಪಿನ ನಂತರ, ಸ್ವತ್ತುಗಳನ್ನು ಒಟ್ಟು ಸೇರಿಸದಿರುವುದರಿಂದ, ವಾದಿಗಳು ದಾವೆಯನ್ನು ಹೂಡಬೇಕಿರಲಿಲ್ಲ.ಅವರು ಮೂಲ ದಾವೆಸಂಖ್ಯೆ: 54/2004 ರಲ್ಲಿ ವಿಭಜನೆಗಾಗಿ ಎದುರು ಕೇಮಿಗಾಗಿ ಕೋರಬಹುದಿತ್ತು; ಆದರೆ, ಅವರು ಹಾಗೆ ಮಾಡಿಲ್ಲವಾದ್ದರಿಂದ, ಅವರು ಪ್ರತ್ಯೇಕ ದಾವೆಯನ್ನು ಹೂಡುವ ತಮ್ಮ ಹಕ್ಕನ್ನು ಕಳೆದುಕೊಂಡಿದ್ದಾರೆ.ಅವರು ಮೂಲ ದಾವೆಸಂಖ್ಯೆ: 54/2004 ರಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸಿದಾಗ, ಅವರು ವಿಭಜನೆಗಾಗಿ ಪ್ರತ್ಯೇಕ ದಾವೆಯನ್ನು ಹೂಡಲು ನ್ಯಾಯಾಲಯದ ಅನುಮತಿಯನ್ನು ಕೋರಿರುವುದಿಲ್ಲವಾದ್ದರಿಂದ, ಅವರ ದಾವೆಯು ಸಿವಿಲ್ ಪ್ರಕ್ರಿಯಾ ಸಂಹಿತೆಯ 2 ನೇ ನಿಯಮದ 2 ನೇ ಕ್ರಮಾದೇಶದ ಮೂಲಕ ನಿಷ್ಕ್ರಿಯವಾಗುತ್ತದೆ.ಇದಲ್ಲದೆ ಅವರು, ಮೂಲ ದಾವೆಸಂಖ್ಯೆ: 54/2004 ರಲ್ಲಿನ ವಿವಾದಸಂಖ್ಯೆ: 1 ನ್ನು ಕುರಿತು ನಿರ್ಣಯಿಸಿರುವುದರ ದೃಷ್ಟಿಯಿಂದ, ಸಿವಿಲ್ ಪ್ರಕ್ರಿಯಾ ಸಂಹಿತೆಯ 11 ನೇ ಪ್ರಕರಣವು ವಿಭಜನೆಯನ್ನು ಕೋರುವುದರಿಂದ ವಾದಿಗಳನ್ನು ನಿರ್ಬಂಧಿಸುತ್ತದೆ ಎಂದು ವಾದಿಸಿದ್ದಾರೆ.

7. ಅವರು ಮೂಲ ದಾವೆಸಂಖ್ಯೆ: 54/2004 ರಲ್ಲಿನ ವಾದದ ಮುಖ್ಯ ಭಾಗವನ್ನು ಉಲ್ಲೇಖಿಸಿ, " ವಾದಿಯು, ನಿಶಾನೆ ಪಿ -22 ಎಂದು ಗುರುತಿಸಲಾದ ವಿಭಜನೆ ಪತ್ರವನ್ನು ಪುನರಾರಂಭಿಸುವವರೆಗೆ ಚಾಲ್ತಿಯಲ್ಲಿರುವವರೆಗೆ 7 ಎಕರೆಗಳ ವಿಸ್ತೀರ್ಣದ ಅಳತೆಯ ಸರ್ವೆಸಂಖ್ಯೆ: 44 ರಲ್ಲಿನ ದಾವೆ ಜಮೀನಿನ ಮಾಲೀಕನಾಗಿ ಮುಂದುವರೆಯುತ್ತಿದ್ದಾರೆ ಎಂದು ಘೋಷಿಸಲಾಗಿದೆ " ಎಂಬ ಆದೇಶದ ಭಾಗವು, ಮೂಲ ದಾವೆಸಂಖ್ಯೆ: 54/2004 ರಲ್ಲಿ ವಿವಾದಸಂಖ್ಯೆ: 1 ನ್ನು ಕುರಿತ ನಿರ್ಣಯಕ್ಕೆ ಅನುಗುಣವಾಗಿರದೆ ಇರುವುದರಿಂದ ಅದನ್ನು ನಿರ್ಲಕ್ಷಿಸಬಹುದು ಎಂದು ವಾದಿಸಿದ್ದಾರೆ.ಈ ಸಂಬಂಧದಲ್ಲಿ ಅವರ ವಾದವೆಂದರೆ, ಇದರಲ್ಲಿನ ಅಪೀಲುದಾರ -2 ನೇ ಪ್ರತಿವಾದಿಯನ್ನು ಸರ್ವೆಸಂಖ್ಯೆ: 44 ರಲ್ಲಿರುವ 7 ಎಕರೆಗಳ ಜಮೀನಿನ ಮಾಲೀಕನೆ ಂ ಬುದಾಗಿ ಘೋಷಿಸಲಾಗಿತ್ತು ಎಂಬ ರೀತಿಯಲ್ಲಿ ಇದನ್ನು ಅರ್ಥ ಮಾಡಿಕೊಳ್ಳಬೇಕು ಎಂಬುದಾಗಿದೆ.ಆದುದರಿಂದ, ಈ ಅಪೀಲು ಪುರಸ್ಕಾರ ಯೋಗ್ಯವಾಗಿದ್ದು, ಪ್ರಶ್ನಿತ ತೀರ್ಪನ್ನು ತಳ್ಳಿಹಾಕಬೇಕೆಂದು ಅವರು ನಿವೇದಿಸಿಕೊಂಡಿದ್ದಾರೆ.

8. 1 ರಿಂದ 5 ರವರೆಗಿನ ಪ್ರತಿವಾದಿಗಳ (1 ರಿಂದ 5 ರವರೆಗಿನ ವಾದಿಗಳು) ಪರ ಮಾನ್ಯ ನ್ಯಾಯವಾದಿಗಳು ವಾದಿಸಿರುವುದೇನೆಂದರೆ, ಅಪೀಲುದಾರರು ಉಲ್ಲೇಖಿಸಿದಂಥದಿನಾಂಕ: 29.06.2000 ದ ವಿಭಜನೆ ಪತ್ರವನ್ನು ಒಂದು ತುಂಡು ಕಾಗದದ ಮೇಲೆ ಬರೆಯಲಾಗಿದ್ದು, ಅದನ್ನು ನೋಂದಾಯಿಸಿರುವುದಿಲ್ಲ ಮತ್ತು ವಾದಿಗಳು ಆ ವಿಭಜನಾ ಪತ್ರದ ಪಕ್ಷಕಾರರಾಗಿರಲಿಲ್ಲ; ಅದು ಒಂದು ಸೃಜಿಸಲಾಗಿದ್ದ ದಸ್ತಾವೇಜಾಗಿತ್ತು; ಮೂಲ ದಾವೆಸಂಖ್ಯೆ:

54/2004 ರಲ್ಲಿನ ತೀರ್ಪ ಮತ್ತು ಡಿಕ್ರಿಯು, ವಾದಿಗಳು ವಿಭಜನೆಯನ್ನು ಪುನರಾರಂಭಿಸಬಹುದು ಎಂಬ ಬಗ್ಗೆ ಅತ್ಯಂತ ಸ್ಪಷ್ಟವಾಗಿದೆ ಮತ್ತು ಅದು ಅವರು ಈ ಪ್ರತ್ಯೇಕ ದಾವೆಯನ್ನು ಹೂಡಲು ಕಾರಣವಾಗಿತ್ತು; ಮೂಲ ದಾವೆಸಂಖ್ಯೆ: 54/2004 ರಲ್ಲಿ, ವಿಭಜನೆ ಪತ್ರವನ್ನಾಧರಿಸಿದ ಅಪೀಲುದಾರರ ಸ್ವಾಮ್ಯವನ್ನು ದಾವೆಯಲ್ಲಿ ನ್ಯಾಯಾಲಯವು ಘೋಷಿಸಬಹುದಾಗಿತ್ತು ಎಂಬುದರಲ್ಲಿ ಸತ್ಯಾಂಶವಿರಬಹುದಾದರೂ, ಸ್ವತ್ತು ವರ್ಗಾವಣೆ ಅಧಿನಿಯಮದ 5ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ವಿಭಜನೆಯು ವರ್ಗಾವಣೆಯೆನಿಸುವುದಿಲ್ಲವಾದ್ದರಿಂದ, ವಿಭಜನೆ ಪತ್ರವನ್ನಾಧರಿಸಿದ ಸ್ವಾಮ್ಯದ ಯಾವುದೇ ಘೋಷಣೆಯಾಗುವುದಿಲ್ಲ ಮತ್ತು ಈ ಸಂಬಂಧದಲ್ಲಿ ಅವರು ಶ್ರೀ ಅರಳಪ್ಪ -ವಿರುದ್ಧ-ಶ್ರೀ ಜಗನ್ನಾಥ್ ಮತ್ತು ಇತರರು, ಮೊಕದ್ದಮೆಯಲ್ಲಿನ ತೀರ್ಪನ್ನು ಉಲ್ಲೇಖಿಸಿದ್ದಾರೆ.ಇದಲ್ಲದೆ ಅವರು ವಾದಿಸಿರುವುದೇನೆಂದರೆ, ವಾದಿಗಳು ದಾಯಾದಿಗಳಾಗಿರುವುದರಿಂದ, ಅವರು ಸಮಾನ ಪಾಲಿಗೆ ಹಕ್ಕುದಾರರಾಗಿದ್ದರು ಮತ್ತು ಮೂಲ ದಾವೆಸಂಖ್ಯೆ: 54/2004 ರಲ್ಲಿನ ಡಿಕ್ರಿಯು, ವಿಭಜನೆಯನ್ನು ಕ್ಲೇಮು ಮಾಡುವ ಅವರ ಹಕ್ಕನ್ನು ಕಸಿದುಕೊಳ್ಳುವುದಿಲ್ಲ ಎಂಬ ಸಂಗತಿಯನ್ನು ವಿಚಾರಣಾ ನ್ಯಾಯಾಲಯವು ಸ್ಪಷ್ಟವಾಗಿ ಗಮನಿಸಿದೆ; ಅಪೀಲುದಾರರು ಮೂಲ ದಾವೆಸಂಖ್ಯೆ: 54/2004 ರಲ್ಲಿನ ಡಿಕ್ರಿಯನ್ನು ಪ್ರಶ್ನಿಸಿಲ್ಲವಾದ್ದರಿಂದ, ತನ್ನ ಸಹೋದರಿಯರು, ಎಂದರೆ ವಾದಿಗಳು ಪಿತ್ರಾರ್ಜಿತ ಸ್ವತ್ತಿನಲ್ಲಿ ವಿಭಜನೆ ಕೋರಲು ಹಕ್ಕುಳ್ಳವರಾಗಿಲ್ಲವೆಂದು ಹೇಳಲಾಗುವುದಿಲ್ಲ.ಇದಲ್ಲದೆ ಮಾನ್ಯ ನ್ಯಾಯವಾದಿಗಳು ವಾದಿಸಿರುವುದೇನೆಂದರೆ, ಅಪೀಲುದಾರರು ದಾವಾ ಸ್ವತ್ತಿನಲ್ಲಿ ವಾದಿಗಳು ತಮ್ಮ ಹಕ್ಕುಗಳನ್ನು ಬಿಟ್ಟು ಕೊಟ್ಟಿದ್ದಾರೆಂದು ವಾದಿಸಿರುವರಾದರೂ, ಅದನ್ನು ಸಾಬೀತುಪಡಿಸುವ ಯಾವ ದಸ್ತಾವೇಜು ಇರುವುದಿಲ್ಲ; ವಾಸ್ತವದಲ್ಲಿ ಹಕ್ಕನ್ನು ಬಿಟ್ಟುಕೊಟ್ಟಿದ್ದರೆ, ಯುಕ್ತವಾಗಿ ನೋಂದಾಯಿಸಿದ ದಸ್ತಾವೇಜು ಇರಬೇಕಿತ್ತು; ಹಕ್ಕು ಬಿಟ್ಟು ಕೊಟ್ಟ ಯಾವ ದಸ್ತಾವೇಜು ಇಲ್ಲವೆಂಬುದನ್ನು ಅಪೀಲುದಾರರು ಅತ್ಯಂತ ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ; ಈ ಎಲ್ಲಾ ಕಾರಣಗಳಿಂದಾಗಿ, ಕೂಡು ಕುಟುಂಬದ ಪಿತ್ರಾರ್ಜಿತ ಸ್ವತ್ತಿನಲ್ಲಿ ಭಾಗವನ್ನು ಕೋರಲು ಇರುವ ವಾದಿಗಳ ಹಕ್ಕನ್ನು ಅಪೀಲುದಾರರು ನಿರಾಕರಿಸಲಾಗುವುದಿಲ್ಲ, ಈ ಅಪೀಲು ಗುಣಾರ್ಹತೆ ಇಲ್ಲದ ಅಪೀಲಾಗಿದ್ದು, ವಜಾಗೊಳ್ಳುವುದಕ್ಕೆ ಯೋಗ್ಯವಾಗಿದೆ.

9. ನಾವು ದಾಖಲೆಗಳನ್ನು ಅವಲೋಕಿಸಿದ್ದೇವೆ ಮತ್ತು ವಾದಾಂಶಗಳನ್ನು ಪರಿಗಣಿಸಿದ್ದೇವೆ.ಚರ್ಚೆಗಾಗಿ ಈ ಮುಂದಿನ ಅಂಶಗಳನ್ನು ರೂಪಿಸಲಾಗಿದೆ:

(i) ವಿಭಜನೆಯ ಆಧಾರದ ಮೇಲೆ ಸ್ವಾಮ್ಯದ ಘೋಷಣೆಯನ್ನು ಕೋರಬಹುದೇ?

(ii) ಎರಡನೇ ಪ್ರತಿವಾದಿಯು, ಮೂಲ ದಾವೆಸಂಖ್ಯೆ: 54/2004 ರಲ್ಲಿನ ತೀರ್ಪು ಮತ್ತು ಡಿಗ್ರಿಯನ್ನು ಪ್ರಶ್ನಿಸದೆ,ದಿನಾಂಕ: 29.06.2000 ದಂದು ಮಾಡಿಕೊಂಡ ವಿಭಜನೆಯಲ್ಲಿ ಆತನಿಗೆ ಹಂಚಿಕೆ ಮಾಡಿದ ಪಾಲಿನ ನಿರುಪಾಧಿಕ ಮಾಲೀಕರಾಗಿರುವರೇ?

(iii) ಸಿವಿಲ್ ಪ್ರಕ್ರಿಯಾ ಸಂಹಿತೆಯ 2 ನೇ ನಿಯಮದ II ನೇ ಕ್ರಮಾದೇಶವನ್ನು, ಮೂಲ ದಾವೆಸಂಖ್ಯೆ: 54/2004 ರಲ್ಲಿ ವಾದಿಗಳು ಎದುರು ಕ್ಲೇಮನ್ನು ಕೋರಿಲ್ಲವಾದ್ದರಿಂದ ದಾವೆಯನ್ನು ಪ್ರತಿಷೇಧಿಸಲಾಗಿದೆ ಎ ಂ ದು ನಿರ್ಣಯಿಸಿರುವುದಕ್ಕೆ ಅನ್ವಯಿಸಬಹುದೇ?

(iv) ಸಿವಿಲ್ ಪ್ರಕ್ರಿಯಾ ಸಂಹಿತೆಯ 11 ನೇ ಪ್ರಕರಣವು, ಅಪೀಲುದಾರರ ಪರ ನ್ಯಾಯವಾದಿಗಳು ವಾದಿಸಿರುವಂತೆ ಅನ್ವಯವಾಗುವುದೇ?

(v) ವಾದಿಗಳು ದಾವೆ ಸ್ವತ್ತುಗಳಲ್ಲಿ ವಿಭಜನೆ ಕ್ಲೇಮು ಮಾಡಲು ಹಕ್ಕುಳ್ಳವರಾಗಿರುವರೆಂದು ವಿಚಾರಣಾ ನ್ಯಾಯಾಲಯವು ಸರಿಯಾಗಿ ನಿರ್ಣಯಿಸಿರುವುದೇ?

(vi) ಆದೇಶವೇನು?

10. ಮೇಲಿನ ಅಂಶಗಳನ್ನು ಚರ್ಚಿಸುವುದಕ್ಕೆ ಮೊದಲು, ವಿಚಾರಣಾ ನ್ಯಾಯಾಲಯವು ದಾಖಲಿಸಿದ ನಿರ್ಣಯಗಳನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸುವುದು ಅಗತ್ಯವಾಗಿದೆ.ಪಿಡಬ್ಲ್ಯು -1 ನೀಡಿದ ಸಾಕ್ಷ್ಯವನ್ನು ಉಲ್ಲೇಖಿಸಿ, ಅವರ ಮೌಖಿಕ ಸಾಕ್ಷ್ಯವನ್ನು ಪ್ರಶ್ನಿಸಿರುವುದಿಲ್ಲವೆಂದು ನಿರ್ಣಯಿಸಲಾಗಿದೆ.ದಸ್ತಾವೇಜೀಯ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ತೀರ್ಪಿನ ಪ್ರಮಾಣೀಕೃತ ಪ್ರತಿಗಳಾಗಿರುವ ನಿಶಾನೆ ಪಿ -1 ಮತ್ತು ಪಿ -2 ರ ಹಾಗೂ ಮೂಲ ದಾವೆಸಂಖ್ಯೆ: 54/2004 ರಲ್ಲಿನ ಡಿಕ್ರಿಯು, ಸದರಿ ದಾವೆಯಲ್ಲಿ ವಾದಿಗಳಾಗಿದ್ದ 2 ನೇ ಪ್ರತಿವಾದಿಯ

ಸಹೋದರಿಯರು ವಿಭಜನೆಯನ್ನು ಪುನರಾರಂಭಿಸುವಂತೆ ಕೋರುವವರೆಗೆ, ಅವರನ್ನು 7 ಎಕರೆ ಜಮೀನಿನ ಮಾಲೀಕನೆಂಬುದಾಗಿ ಘೋಷಿಸಲಾಗಿತ್ತು; ಅದರರ್ಥ ಮೂಲ ದಾವೆಸಂಖ್ಯೆ: 54/2004 ರಲ್ಲಿ, ವಿಭಜನೆ ಕೋರುವ ಅವರ ಹಕ್ಕನ್ನು ಪರಿಗಣಿಸಲಾಗಿತ್ತು ಮತ್ತು ತದನುಸಾರವಾಗಿ ಅವರು ದಾವೆ ಹೂಡಿದ್ದಾರೆ ಎಂಬ ಅಂಶವನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತವೆ.

11. ಎರಡನೇ ಪ್ರತಿವಾದಿಯು ತೆಗೆದುಕೊಂಡ ನಿರ್ದಿಷ್ಟ ಪ್ರತಿವಾದಕ್ಕೆ ಸಂಬಂಧಿಸಿದಂತೆ, ಡಿಡಬ್ಲ್ಯು -1 ರಿಂದ ಡಿಡಬ್ಲ್ಯು -5 ರವರೆಗಿನ ಮೌಖಿಕ ಸಾಕ್ಷ್ಯಗಳಿಂದ,ದಿನಾಂಕ: 29.06.2000 ದಂದು ನಡೆದ ವಿಭಜನೆಯ ಸಮಯದಲ್ಲಿ ಸ್ವತ್ತುಗಳಲ್ಲಿನ ತಮ್ಮ ಹಕ್ಕುಗಳನ್ನು ವಾದಿಗಳು ಬಿಟ್ಟುಕೊಟ್ಟಿದ್ದರೆಂಬುದು ಯಾವುದೇ ರೀತಿಯಲ್ಲೂ ಸಾಬೀತಾಗಿರುವುದಿಲ್ಲ.ವಾಸ್ತವವಾಗಿ ಅವರು ತಮ್ಮ ಹಕ್ಕುಗಳನ್ನು ಬಿಟ್ಟುಕೊಟ್ಟಿದ್ದರೆ, ಅದನ್ನು ನೋಂದಾಯಿತ ದಾಖಲೆಯ ಮೂಲಕ ಮಾಡಬಹುದಾಗಿತ್ತಾದರೂ, ಅಂಥ ಯಾವುದೇ ದಸ್ತಾವೇಜನ್ನು ಬರೆದುಕೊಟ್ಟಿಲ್ಲ; ಆದ್ದರಿಂದ, ಕೇವಲ ಸಾಕ್ಷಿದಾರರ ಮೌಖಿಕ ಸಾಕ್ಷ್ಯಗಳು ಮಾತ್ರವೇ ಉದ್ದೇಶವನ್ನು ಸಾಬೀತುಪಡಿಸುವುದಿಲ್ಲ ಮತ್ತು ಅವುಗಳನ್ನು ಪರಿಗಣಿಸಲೂ ಸಹ ಆಗುವುದಿಲ್ಲ.ಹಾಗೂ ನಿಶಾನೆ ಡಿ -1 ರಿಂದ ಡಿ -8 ರವರೆಗಿನ ದಾಖಲೆಗಳು ವಾದಿಗಳ ಹಕ್ಕುಗಳನ್ನು ಬಿಟ್ಟು ಕೊಟ್ಟಿರುವುದನ್ನು ಸಾಬೀತುಪಡಿಸುವುದಿಲ್ಲವಾದ್ದರಿಂದ, ವಾದಿಗಳ ಪೈಕಿ ಪ್ರತಿಯೊಬ್ಬರೂ ದಾವಾ ಸ್ವತ್ತುಗಳಲ್ಲಿ ತಲಾ 1/ 8 ರಷ್ಟು ಪಾಲಿಗೆ ಹಕ್ಕುಳ್ಳವರಾಗುತ್ತಾರೆ.

12. ಇದು ಮೊದಲನೇ ಅಪೀಲಾಗಿರುವುದರಿಂದ, ಸಾಕ್ಷ್ಯವನ್ನು ಪುನರ್ ವಿಶ್ಲೇಷಿಸಿದ್ದೇವೆ.ನಾವು ಗಮನಿಸಿದ್ದೇನೆಂದರೆ, ಪಿಡಬ್ಲ್ಯು -1 ಎಂದರೆ 1 ನೇ ವಾದಿಯು, ಮುಖ್ಯ ವಿಚಾರಣೆಯ ರೂಪದಲ್ಲಿ ಸಲ್ಲಿಸಿದ ತನ್ನ ಅಫಿಡಾವಿಟ್ನಲ್ಲಿ, ತಾನು ಮತ್ತು ತನ್ನ ಸಹೋದರಿಯರುದಿನಾಂಕ: 29.06.2000 ದ ವಿಭಜನೆಯ ಪಕ್ಷಕಾರರಾಗಿರಲಿಲ್ಲವೆಂದು ಮತ್ತು ಅದು ತಮಗೆ ಬಂಧನಕಾರಿಯಲ್ಲವೆಂದು; ಮೂಲ ದಾವೆಸಂಖ್ಯೆ: 54/2004 ರಲ್ಲಿನ ತೀರ್ಪು ವಿಭಜನೆಯನ್ನು ಪುನರಾರಂಭಿಸುವ ತಮ್ಮ ಹಕ್ಕನ್ನು ಎತ್ತಿಹಿಡಿದಿದೆ ಎಂದು ಹೇಳಿದ್ದಾರೆ.ಮುಂದುವರೆಸುತ್ತಾ, ಅವರು, ಎರಡನೇ ಪ್ರತಿವಾದಿಯು ತನ್ನ ವಿವಾಹವನ್ನು ನೆರವೇರಿಸಿಲ್ಲ, ಬದಲಾಗಿ ತನ್ನ ತಂದೆ ಎಂದರೆ ಮೊದಲನೇ ಪ್ರತಿವಾದಿಯು ತನ್ನ ವಿವಾಹವನ್ನು ನೆರವೇರಿಸಿರುವುದಾಗಿ ಹೇಳಿದ್ದಾರೆ.ಅವರನ್ನು ಸುದೀರ್ಘವಾಗಿ ಪಾಟಿ-ಸವಾಲಿಗೆ ಒಳಪಡಿಸಲಾಯಿತಾದರೂ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಾಗಲಿಲ್ಲ ಮತ್ತು ಹಲವು ಪ್ರಶ್ನೆಗಳು ಸಲಹಾತ್ಮಕವಾಗಿದ್ದು, ಅವುಗಳನ್ನು ಅವರು ನಿರಾಕರಿಸಿದ್ದಾರೆ; ಹಾಗಾಗಿ ಅವುಗಳಿಂದ ಪ್ರಯೋಜನವಿಲ್ಲ.ಮೂಲ ದಾವೆಸಂಖ್ಯೆ: 54/2004 ರಲ್ಲಿನ ತೀರ್ಪಿನ ಮತ್ತು ಡಿಕ್ರಿಯ ಪ್ರಮಾಣೀಕೃತ ಪ್ರತಿಗಳಾದ ನಿಶಾನೆ ಪಿ -1 ಮತ್ತು ಪಿ -2 ಇವು ವಾದಿಗಳು ಅವಲಂಬಿಸಿರುವ ಮುಖ್ಯ ದಸ್ತಾವೇಜುಗಳಾಗಿದ್ದು, 2 ನೇ ಪ್ರತಿವಾದಿಯು ಸಹ ತನ್ನ ಹಕ್ಕನ್ನು ಸಮರ್ಥಿಸಲು ಅದೇ ತೀರ್ಪನ್ನು ಅವಲಂಬಿಸಿರುವುದರಿಂದ, ಅವುಗಳನ್ನು ಸವಿವರವಾಗಿ ಚರ್ಚಿಸಬೇಕಾದ ಅಗತ್ಯವಿಲ್ಲ.

13. ಪ್ರತಿವಾದಿಗಳ ಪರವಾಗಿ ಒಟ್ಟು ಐವರು ಸಾಕ್ಷಿದಾರರಾದ ಡಿಡಬ್ಲ್ಯು ಇ 1 ರಿಂದ ಡಿಡಬ್ಲ್ಯು -5 ಇವರು ಸಾಕ್ಷ್ಯ ಎಂ ನೀಡಿದ್ದಾರೆ.ಡಿಡಬ್ಲ್ಯು -1 ಎರಡನೇ ಪ್ರತಿವಾದಿಯಾಗಿದ್ದು, ಮುಖ್ಯ ವಿಚಾರಣೆಯಲ್ಲಿದಿನಾಂಕ: 25.06.2000 ದ ವಿಭಜನೆಯ ಆಧಾರದ ಮೇಲೆ 7 ಎಕರೆಗಳ ಜಮೀನಿನ ಮೇಲೆ ತನ್ನ ಸ್ವಾಧೀನತೆಯನ್ನು ಮತ್ತು ಮೂಲ ದಾವೆಸಂಖ್ಯೆ: 54/2004 ರಲ್ಲಿ ಅದರ ಮೇಲೆ ಘೋಷಿಸಲಾಗಿರುವ ತನ್ನ ಸ್ವಾಮ್ಯದ ಬಗ್ಗೆ ಒತ್ತಿ ಹೇಳಿದ್ದಾರೆ.ಆದರೆ, ಅವರ ಪಾಟಿ-ಸವಾಲಿನಿಂದ ೧ 0 ಅವರು ಜಾರಿಕೆಯ ಉತ್ತರಗಳನ್ನು ನೀಡಿದ್ದರು ಮತ್ತು ಮೂಲ ದಾವೆಸಂಖ್ಯೆ: 54/2004 ರಲ್ಲಿನ ತೀರ್ಮಾನದ ಬಗ್ಗೆ ಅವರು ನಿರ್ಲಕ್ಷ್ಯವನ್ನು ತೋರುವಂತೆ ನಟಿಸುತ್ತಿದ್ದಾರೆ ಮತ್ತು ಅವರ ಸಹೋದರಿಯರು ವಿಭಜನೆಯನ್ನು ಪುನರಾರಂಭಿಸುವುದಕ್ಕೆ ದಾವೆಯನ್ನು ಸಲ್ಲಿಸುವ ಸ್ವಾತಂತ್ರ್ಯ ಹೊಂದಿದ್ದರು ಎಂಬುದನ್ನು ಬಹಿರಂಗಪಡಿಸುತ್ತದೆ.ದಿನಾಂಕ: 29.06.2000 ದ ವಿಭಜನೆ ಪತ್ರಕ್ಕೆ ಅವರ ಸಹೋದರಿಯರು ಸಹಿ ಮಾಡಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾರೆ ಮತ್ತು ಅವರ ಸಹೋದರಿಯರು ವಿಭಜನೆಗೆ ಸಮ್ಮತಿಸಿದ್ದರೆಂಬುದನ್ನು ಸಹ ಅವರು ಹೇಳಿದ್ದಾರೆ.

14. ಡಿಡಬ್ಲ್ಯು -2 ರಿಂದ ಡಿಡಬ್ಲ್ಯು -4 ಇವರು ಸ್ವತಂತ್ರ ಸಾಕ್ಷಿದಾರರಾಗಿದ್ದಾರೆ.ವಾದಿಗಳ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ವಿಭಜನೆಯಾಗಿತ್ತೆಂಬುದನ್ನು ಹಾಗೂ ಸದರಿ ವಿಭಜನೆಯಲ್ಲಿ 2 ನೇ ಪ್ರತಿವಾದಿಗೆ 7 ಎಕರೆಗಳ ಜಮೀನನ್ನು ಹಂಚಿಕೆ ಮಾಡಲಾಗಿತ್ತು, ವಾದಿಗಳು ಸ್ವತ್ತಿನಲ್ಲಿನ ತಮ್ಮ ಭಾಗಗಳ ಮೇಲಿನ ಹಕ್ಕುಗಳನ್ನು ಬಿಟ್ಟುಕೊಟ್ಟಿದ್ದರು ಮತ್ತು ಪ್ರತಿಯಾಗಿ 2 ನೇ ಪ್ರತಿವಾದಿಯು ತನ್ನ ಸಹೋದರಿಯರ ವಿವಾಹದ ವೆಚ್ಚಗಳನ್ನು

ಭರಿಸಲು ಒಪ್ಪಿಕೊಂಡಿದ್ದರು ಎಂಬುದನ್ನು ಕುರಿತು ಡಿಡಬ್ಲ್ಯು -2 ಹೇಳಿಕೆ ನೀಡಿದ್ದಾರೆ.ಪ್ರತಿವಾದಿಯು ವಿವಾಹದ ವೆಚ್ಚಗಳಿಗಾಗಿ ತನ್ನಿಂದ ಸಾಲ ಪಡೆದಿರುವುದಾಗಿ ಸಹ ಅವರು ಹೇಳಿದ್ದಾರೆ.ಪಾಟಿ-ಸವಾಲಿನಲ್ಲಿ ಅವರು, ವಾದಿಗಳು ವಿಭಜನಾ ಪತ್ರಕ್ಕೆ ಸಹಿ ಹಾಕಿರುವುದಿಲ್ಲವೆಂದು ಹಾಗೂ ಎರಡನೇ ಪ್ರತಿವಾದಿಗೆ ಸಾಲ ನೀಡಿದ್ದಕ್ಕೆ ತನ್ನ ಬಳಿ ಯಾವುದೇ ಪುರಾವೆ ಇಲ್ಲ ಹಾಗೂ ವಾದಿಗಳ ಹಕ್ಕುಗಳನ್ನು ಬಿಟ್ಟುಕೊಟ್ಟಿದ್ದಕ್ಕೆ ಅವರು ಯಾವುದೇ ದಸ್ತಾವೇಜನ್ನು ಬರೆದುಕೊಟ್ಟಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾರೆ.

15. ವಾದಿಗಳ ವಿವಾಹ ವೆಚ್ಚಗಳನ್ನು ಭರಿಸುವ ಜವಾಬ್ದಾರಿಯನ್ನು 2 ನೇ ಪ್ರತಿವಾದಿಯು ತೆಗೆದುಕೊಂಡ ಕಾರಣದಿಂದಾಗಿ ಸ್ವತ್ತಿನಲ್ಲಿನ ಅವರ ಹಕ್ಕುಗಳನ್ನು ಅವರು ಬಿಟ್ಟುಕೊಟ್ಟಿದ್ದರಿಂದ, ದಾವಾ ಸ್ವತ್ತಿನಲ್ಲಿ ವಾದಿಗಳು ಪಾಲನ್ನು ಹೊಂದಿರುವುದಿಲ್ಲ ಎಂದು ಡಿಡಬ್ಲ್ಯು -3 ಮತ್ತು ಡಿಡಬ್ಲ್ಯು -4 ಏಕಪ್ರಕಾರವಾಗಿ ಹೇಳಿದ್ದಾರೆ.ಇದಲ್ಲದೆ, ವಿಭಜನಾ ಪತ್ರವನ್ನು ಡಿಡಬ್ಲ್ಯು -3 ಬರೆದಿದ್ದರೆಂದು ಡಿಡಬ್ಲ್ಯು -4 ಹೇಳಿದ್ದಾರೆ.ಅವರ ಪಾಟಿ-ಸವಾಲಿನಿಂದ, ವಿಭಜನಾ ಪತ್ರದಲ್ಲಿ ವಾದಿಗಳ ಸಹಿ ಇರಲಿಲ್ಲವೆಂದು ಮತ್ತು ಅವರ ಪಾಲುಗಳನ್ನು ಬಿಟ್ಟುಕೊಟ್ಟಿದ್ದಕ್ಕೆ ಯಾವುದೇ ದಸ್ತಾವೇಜನ್ನು ಬರೆದುಕೊಟ್ಟಿರಲಿಲ್ಲವೆಂದು ಒಪ್ಪಿಕೊಂಡಿದ್ದರೆಂಬುದು ಸಹ ತಿಳಿದುಬರುತ್ತದೆ.

16. ಡಿಡಬ್ಲ್ಯು -5 ಇವರು 3 ನೇ ಪ್ರತಿವಾದಿಯಾಗಿದ್ದು, ದಾವಾ ಸ್ವತ್ತುಗಳು ಕೂಡು ಕುಟುಂಬಕ್ಕೆ ಸೇರಿದವುಗಳಾಗಿವೆ ಎಂದು ಮತ್ತು ತಾನು ಹಾಗೂ ವಾದಿಗಳು ಸ್ವತ್ತುಗಳಲ್ಲಿ ಸಮಾನ ಪಾಲಿಗೆ ಹಕ್ಕುಳ್ಳವರಾಗಿದ್ದೇವೆಂದು ಹೇಳಿದ್ದಾರೆ.2 ನೇ ಪ್ರತಿವಾದಿಯು ವಾದಿಗಳ ವಿವಾಹವನ್ನು ನೆರವೇರಿಸಿಲ್ಲವೆಂದು ಸಹ ಅವರು ಹೇಳಿದ್ದಾರೆ.ಪಾಟಿ-ಸವಾಲಿನಲ್ಲಿ ಅವರು ನೀಡಿದ ಉತ್ತರಗಳಿಂದ, ಅವರು ಜಂಟಿ ಸ್ವಾಮ್ಯವನ್ನು ಸಮರ್ಥಿಸುತ್ತಾರಾದರೂ, ಪ್ರತಿಯೊಬ್ಬ ಸಹೋದರನ ಪ್ರತ್ಯೇಕ ನಿವಾಸವನ್ನು ಹಾಗೂ ಕೃಷಿ ಭೂಮಿಗಳ ವಿಭಜನೆಯಂತೆ ಮನೆ ಸ್ವತ್ತುಗಳ ವಿಭಜನೆಯನ್ನು ಸಮರ್ಥಿಸುವುದಾಗಿ ಒಪ್ಪಿಕೊಂಡಿದ್ದಾರೆ ಎಂಬುದು ತಿಳಿದುಬರುತ್ತದೆ.ಆದರೆ. ಅವರ ಒಟ್ಟಾರೆ ಮೌಖಿಕ ಸಾಕ್ಷ್ಯದಿಂದ, ಈ ಮೊದಲು ವಿಭಜನೆ ಇರಲಿಲ್ಲವೆಂಬುದು ತಿಳಿದುಬರುತ್ತದೆ.

17. ಸಾಕ್ಷ್ಯವನ್ನು ವಿಶ್ಲೇಷಿಸಿದ ನಂತರ,ದಿನಾಂಕ: 29.06.2000 ದಂದು ವಿಭಜನೆಯಾಗಿರಬಹುದಾದರೂ, ವಾದಿಗಳು ಅದಕ್ಕೆ ಪಕ್ಷಕಾರರಾಗಿದ್ದ ಸಾಧ್ಯತೆ ಇಲ್ಲವೆಂಬುದು ಕಂಡುಬರುತ್ತದೆ.ಸದರಿ ವಿಭಜನೆಯು ವಾದಿಗಳನ್ನು ಬಂಧನಕಾರಿಯಾಗಿಸುವುದಿಲ್ಲ.ಮೂಲ ದಾವೆಸಂಖ್ಯೆ: 54/2004 ರಲ್ಲಿನ ತೀರ್ಪು,ದಿನಾಂಕ: 29.06.2000 ದ ವಿಭಜನೆಯ ಆಧಾರದ ಮೇಲೆ ಎರಡನೇ ಪ್ರತಿವಾದಿಯ ಸ್ವಾಮ್ಯವನ್ನು ಸಾಬೀತುಪಡಿಸಲಾಗಿದೆ ಎಂದು ನಿರ್ಣಯಿಸಿದ ಹೊರತಾಗಿಯೂ, ವಿಭಜನೆಯನ್ನು ವಾದಿಗಳು ಕ್ಲೇಮು ಮಾಡಬಹುದಾಗಿತ್ತು ಎಂಬುದು ತಿಳಿದುಬರುತ್ತದೆ; ಹಾಗೂ ವಿಭಜನೆಯನ್ನು ವಾದಿಗಳು ಪುನರಾರಂಭಿಸುವವರೆಗೆ ಎರಡನೇ ಪ್ರತಿವಾದಿಯ ಸ್ವಾಮ್ಯವು ಜಾರಿಯಲ್ಲಿರಬೇಕೆಂಬುದು ಸಿಂಧುವೆಂದು ನಿರ್ಣಯಿಸಲಾಗಿತ್ತು.ದಾಖಲೆಯಲ್ಲಿನ ಸಾಕ್ಷ್ಯದಿಂದ ಸಹ, ಸ್ವತ್ತುಗಳು ಪಿತ್ರಾರ್ಜಿತವೆಂದು ಮತ್ತು ವಾದಿಗಳು ಸಹಜ ಕ್ರಮದಲ್ಲಿ ಪಾಲುದಾರರೆಂದು ತಿಳಿದುಬರುತ್ತದೆ.ಅಷ್ಟರಮಟ್ಟಿಗೆ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯಗಳು ಅಂಗೀಕಾರಾರ್ಹವಾಗಿವೆ.ಮುಖ್ಯ ಸಂಗತಿಗಳನ್ನು ಕುರಿತ ಈ ನಿರ್ಣಯಗಳೊಂದಿಗೆ, ಮೇಲೆ ನಮೂದಿಸಿದಂತೆ ರೂಪಿಸಲಾದ ವಾದಾಂಶಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ವಾದಾಂಶಸಂಖ್ಯೆ: ( i)

18.ದಿನಾಂಕ: 29.06.2000 ದ ವಿಭಜನೆ ಪತ್ರವನ್ನು ಉಲ್ಲೇಖಿಸುವ ಮೂಲಕ ವಾದಿಗಳ ಪರ ಮಾನ್ಯ ನ್ಯಾಯವಾದಿಗಳು ಪ್ರಾಸಂಗಿಕವಾಗಿ ಈ ಪ್ರಶ್ನೆಯನ್ನು ಎತ್ತಿದ್ದಾರೆ.ಅವರು ಎರಡು ವಾದಾಂಶಗಳನ್ನು ಎತ್ತಿದ್ದಾರೆ, ಮೊದಲನೆಯದಾಗಿ, ವಿಭಜನೆಯು ವರ್ಗಾವಣೆಯಲ್ಲಿ ಮತ್ತು ಅದರಿಂದಾಗಿ ವಿಭಜನೆಯನ್ನಾಧರಿಸಿ ಸ್ವಾಮ್ಯದ ಘೋಷಣೆ ಮಾಡಲಾಗುವುದಿಲ್ಲ.ಅವರು ಅರಳಪ್ಪ (ಮೇಲೆ ಹೇಳಿದ) ಮೊಕದ್ದಮೆಯಲ್ಲಿನ ತೀರ್ಪನ್ನು ಅವಲಂಬಿಸಿದ್ದಾರೆ.ಮೂಲದಾವೆಸಂಖ್ಯೆ: 54/2004 ರಲ್ಲಿನ ವಿವಾದಸಂಖ್ಯೆ: 1 ಕ್ಕೆ ನೀಡಿದ ನಿರ್ಣಯವು ಸರಿಯಾಗಿಲ್ಲವೆಂದು ವಾದಿಸಲು ಈ ವಾದಾಂಶವನ್ನು ಎತ್ತಿದ್ದಾರೆಂಬುದು ಅತ್ಯಂತ ಸ್ಪಷ್ಟವಾಗಿದೆ.ಸದರಿ ದಾವೆಯಲ್ಲಿ ಪ್ರತಿವಾದಿಗಳಾಗಿದ್ದ ವಾದಿಗಳು, ಅದರಲ್ಲಿನ ಡಿಕ್ರಿಯನ್ನು ಪ್ರಶ್ನಿಸಿದ ಅಪೀಲನ್ನು ಸಲ್ಲಿಸಿಲ್ಲವಾದರೂ, ಈ ಸಂಬಂಧದಲ್ಲಿ, ವಿಭಜನೆಯನ್ನು ಪುನರಾರಂಭಿಸುವುದನ್ನು ಕೋರಿ ಪ್ರತ್ಯೇಕ ದಾವೆ ಸಲ್ಲಿಸಲು ಅವರು ಸ್ವತಂತ್ರರಿದ್ದರು ಎಂಬುದಕ್ಕಾಗಿ ಅವರು ಅಪೀಲು ಸಲ್ಲಿಸುವ ಅಗತ್ಯವಿದ್ದಿರಲಿಲ್ಲ ಎಂದು

ವಾದಿಸಿದ್ದಾರೆ.ಎರಡನೆಯದಾಗಿ, ಸದರಿ ವಿಭಜನೆಯನ್ನು ನೋಂದಾಯಿಸಿಲ್ಲವಾದ್ದರಿಂದ, ಹಾಗೂ ಹಿಂದು ಉತ್ತರಾಧಿಕಾರ ಅಧಿನಿಯಮದ 6 ನೇ ಪ್ರಕರಣಕ್ಕೆ ಕೇಂದ್ರದ ತಿದ್ದುಪಡಿಯ ಹಿನ್ನೆಲೆಯಲ್ಲಿ, ನೋಂದಾಯಿತವಲ್ಲದ ವಿಭಜನೆಗೆ ಮನ್ನಣೆ ನೀಡಲಾಗುವುದಿಲ್ಲ ಮತ್ತು ದಾಯಾದಿಯ ಮಕ್ಕಳ ಪಾಲುಗಳನ್ನು ನಿರಾಕರಿಸಲಾಗುವುದಿಲ್ಲ.

19. ಅರಳಪ್ಪ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ಈ ಉಚ್ಚ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು, ವಿಭಜನೆಯು ಸ್ವತ್ತಿನ ವರ್ಗಾವಣೆಗೆ ಸಮನಾಗುವುದಿಲ್ಲದಿರುವುದರಿಂದ ಹಾಗೂ ಯಾವುದೇ ಸ್ವಾಮ್ಯವನ್ನು ತಿಳಿಸುವುದಿಲ್ಲವಾದ್ದರಿಂದ, ವಿಭಜನೆಯ ಆಧಾರದ ಮೇಲೆ ಸ್ವಾಮ್ಯದ ಘೋಷಣೆಯನ್ನು ಕೋರಲಾಗುವುದಿಲ್ಲ ಎಂದು ನಿರ್ಣಯಿಸಿದ್ದಾರೆ.ವಿಭಜನೆಯ ಆಧಾರದ ಮೇಲೆ ಸ್ವಾಮ್ಯದ ಘೋಷಣೆಯನ್ನು ಯಾರೊಬ್ಬರೂ ಕೋರಲಾಗುವುದಿಲ್ಲವೆಂಬ ಮಾನ್ಯ ಏಕಪೀಠ ನ್ಯಾಯಾಧೀಶರ ಅಭಿಪ್ರಾಯವನ್ನು ಒಪ್ಪುವುದು ನಮಗೆ ಕಷ್ಟಸಾಧ್ಯವಾಗಿ ಕಂಡುಬರುತ್ತದೆ.ಸ್ವತ್ತು ವರ್ಗಾವಣೆ ಅಧಿನಿಯಮದ 5 ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ವಿಭಜನೆಯು ವರ್ಗಾವಣೆಯಾಗುವುದಿಲ್ಲವೆಂಬ ಪ್ರತಿಪಾದನೆಯನ್ನು ಒಪ್ಪಲಾಗಿದೆ.ವಿಭಜನೆಯು, ಸ್ವತ್ತಿನಲ್ಲಿ ಪಾಲುಗಳಿಗೆ ಹಕ್ಕುಳ್ಳವರಾಗಿರುವ ವ್ಯಕ್ತಿಗಳ ನಡುವೆ ಅಥವಾ ಅವರ ಪೈಕಿ ಪಾಲುಗಳ ಹೊಂದಾಣಿಕೆ ಮಾತ್ರವಾಗಿದೆ.ಅನಿಶ್ಚಿತ ಮತ್ತು ಅಸ್ಪಷ್ಟವಾಗಿರುವ ಪಾಲು, ಒಮ್ಮೆ ವಿಭಜನೆಯಾದ ನಂತರ ನಿಶ್ಚಿತವಾಗುತ್ತದೆ.

20. ವಿಭಜನೆಯಾದ ನಂತರ ಸಹ, ಒಬ್ಬ ಪಾಲುದಾರ ಇನ್ನೊಬ್ಬ ಪಾಲುದಾರನ ಹಿತಾಸಕ್ತಿಯನ್ನು ಬಿಟ್ಟು ಕೊಟ್ಟಾಗ, ಆ ಮೂಲಕ ಪ್ರತಿಯೊಬ್ಬ ಪಾಲುದಾರನ ನಿಶ್ಚಿತ ಹಿತಾಸಕ್ತಿಯು ಸೃಜನೆಯಾಗುತ್ತದೆ.ಪಾಲು ನಿಶ್ಚಿತವಾಗುತ್ತದೆ ಮತ್ತು ಈ ಕಾರಣಕ್ಕಾಗಿ ಭಾರತ ನೋಂದಣಿ ಅಧಿನಿಯಮದ 17 ನೇ ಪ್ರಕರಣದ ಮೇರೆಗೆ ವಿಭಜನೆ ಪತ್ರದ ನೋಂದಣಿಯು ಕಡ್ಡಾಯವಾಗಿದೆ.ಒಬ್ಬ ಹಿಂದುವಿನ ಸ್ವಯಾರ್ಜಿತ ಅಥವಾ ಪ್ರತ್ಯೇಕ ಸ್ವತ್ತಿನ ವಿಭಜನೆಯಾದಾಗಲೆಲ್ಲಾ, ಪ್ರತಿಯೊಬ್ಬ ಪಾಲುದಾರನಲ್ಲಿ ನಿರುಪಾಧಿಕ ಹಿತಾಸಕ್ತಿ ಸೃಜನೆಯಾಗುತ್ತದೆ ಮತ್ತು ಒಬ್ಬಾತನು ಇಚ್ಛಿಸುವ ರೀತಿಯಲ್ಲಿ 0 ತಾನು ಸ್ವತ್ತಿನೊಂದಿಗೆ ವ್ಯವಹರಿಸಬಹುದು.ಒಬ್ಬನ ಸ್ವಾಮ್ಯಕ್ಕೆ ಅಪಾಯವುಂಟಾದಾಗ ಸ್ವಾಮ್ಯದ ಘೋಷಣೆಯನ್ನು ಕೋರಲು ಯಾವುದೇ ಪ್ರತಿಬಂಧವಿರುವುದಿಲ್ಲ.

21. ಹಿಂದು ಕೂಡು ಕುಟುಂಬದ ಪಿತ್ರಾರ್ಜಿತ ಸ್ವತ್ತಿನ ವಿಭಜನೆ ಕೈಗೊಂಡಾಗ, ಕೂಡು ಕುಟುಂಬದ ಸದಸ್ಯನು ವಿಭಜನೆಯ ದಿನಾಂಕದಂದು ಮಗ ಅಥವಾ ಮಗಳನ್ನು ಹೊಂದಿರದೆ ಇದ್ದರೆ, ಆತನು ನಿರುಪಾಧಿಕವಾಗಿ ಪಾಲಿಗೆ ಹಕ್ಕುಳ್ಳವನಾಗುತ್ತಾನೆ, ಮತ್ತು ಮಗ ಅಥವಾ ಮಗಳು ಹುಟ್ಟುವವರೆಗೆ, ಆತನು ಅದನ್ನು ನಿರುಪಾಧಿಕವಾಗಿ ಧಾರಣೆ ಮಾಡುವುದು ಮುಂದುವರಿಯುತ್ತದೆ.ಆದರೆ, ಆತನ ಸ್ವಾಮ್ಯಕ್ಕೆ ಅಥವಾ ಆತನು ಪ್ರತಿನಿಧಿಸುವ ವಿಭಾಗಕ್ಕೆ ಆತಂಕವಿದ್ದಾಗ, ಆತನು ಮಾತ್ರವೇ ನಿರುಪಾಧಿಕ ಮಾಲೀಕನಾಗಿದ್ದರೆ, ಆತನು ವೈಯಕ್ತಿಕವಾಗಿಯಾಗಲಿ ಅಥವಾ ಆತನ ವಿಭಾಗವನ್ನು ಪ್ರತಿನಿಧಿಸುತ್ತಿದ್ದರೆ, ಸ್ವಾಮ್ಯದ ಘೋಷಣೆಗೆ ಅಥವಾ ಸಂದರ್ಭಗಳನ್ನಾಧರಿಸಿದ ಯಾವುದೇ ಇತರ ಪರಿಹಾರಕ್ಕೆ ಅದನ್ನು ದಾವೆಗೆ ತರಬಹುದಾಗಿದೆ.ಅಂಥ ಯಾವುದೇ ನಿಷೇಧವಿರುವುದಿಲ್ಲ.

22. ಮುಂದಿನ ಅಂಶವು, ಹಿಂದು ಕಾನೂನಿನ ವಿಶೇಷ ಲಕ್ಷಣವಾಗಿರುವ ಮೌಖಿಕ ವಿಭಜನೆಯನ್ನು ಕುರಿತಾಗಿದೆ.ಮೌಖಿಕ ವಿಭಜನೆಯನ್ನಾಧರಿಸಿದ ಸ್ವಾಮ್ಯದ ಘೋಷಣೆಯನ್ನು ಕೋರುವುದಕ್ಕೆ ಯಾವುದೇ ಅಡೆತಡೆ ಇಲ್ಲವಾದರೂ, ಅದಕ್ಕೆ ಅಗತ್ಯವಿರುವುದು ನಿಖರ ಪುರಾವೆ.ವಿಭಜನೆಯ ವಿವರಣಾ ಪತ್ರ ಲಭ್ಯವಿದ್ದರೆ, ಅದನ್ನು ಹಾಜರುಪಡಿಸಿ ಸಾಬೀತುಪಡಿಸಬೇಕಾಗುತ್ತದೆ.ಇದಲ್ಲದೆ, ಮೌಖಿಕ ವಿಭಜನೆಯನುಸಾರ ನಡೆದುಕೊ ೦ ಡಿರಬೇಕು.ಅದು ಕಾಲಾಂತರದಲ್ಲಿ ಅ ಸಾಬೀತಾಗಬೇಕಾಗುತ್ತದೆ.

23. ಮಾನ್ಯ ನ್ಯಾಯವಾದಿಗಳು ಹಿಂದು ಉತ್ತರಾಧಿಕಾರ ಅಧಿನಿಯಮದ 6 ನೇ ಪ್ರಕರಣವನ್ನು ಉಲ್ಲೇಖಿಸಿರುವುದರಿಂದ, ಆ ಅಂಶವನ್ನು ಕುರಿತು ಈಗ ವ್ಯವಹರಿಸಬೇಕಿದೆ.ದಿನಾಂಕ: 09.09.2005 ರಿಂದ ಜಾರಿಗೆ ಬರುವಂತೆ ಹಿಂದು ಉತ್ತರಾಧಿಕಾರ ಅಧಿನಿಯಮದ 6 ನೇ ಪ್ರಕರಣಕ್ಕೆ ಮುಖ್ಯ ತಿದ್ದುಪಡಿಯನ್ನು ತರಲಾಗಿದ್ದು, ಮಿತಾಕ್ಷರ ಸಂಹಿತೆಯ ಕಾನೂನಿಂದ ರೂಪಿತಗೊಂಡ ಹಿಂದು ಕೂಡು ಕುಟುಂಬದಲ್ಲಿ ಮಗಳಿಗೆ ಸಮಾನ ಹಕ್ಕನ್ನು ನೀಡಿ, ಆಕೆಯನ್ನು ದಾಯಾದಿಯೆಂದು ಗುರುತಿಸಲಾಗಿದೆ.ಆದರೆ, 6 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಪರಂತುಕವು,ದಿನಾಂಕ: 20.12.2004 ಕ್ಕೆ ಮೊದಲು ಕೈಗೊಂಡ ವಿಭಜನೆಯನ್ನು ಒಳಗೊಂಡು ಯಾವುದೇ ವಿಲೇವಾರಿಯನ್ನು ಅಸಿಂಧುಗೊಳಿಸಿರುವುದಿಲ್ಲ.( 5) ನೇ ಉಪ-ಪ್ರಕರಣದಲ್ಲಿ, 6 ನೇ ಪ್ರಕರಣದಲ್ಲಿರುವುದಾವುದೂ,ದಿನಾಂಕ: 20.12.2004 ಕ್ಕೆ ಮೊದಲು ಜಾರಿಗೊಂಡಿರುವ ವಿಭಜನೆಗೆ

ಅನ್ವಯಿಸತಕ್ಕದ್ದಲ್ಲವೆಂದು ಸಹ ಹೇಳಲಾಗಿದೆ.( 5) ನೇ ಉಪ ಪ್ರಕರಣದ ವಿವರಣೆಯಲ್ಲಿ, ವಿಭಜನಾ ಪತ್ರವನ್ನು ನೋಂದಣಿ ಅಧಿನಿಯಮದ ಅಡಿಯಲ್ಲಿ ಯುಕ್ತವಾಗಿ ನೋಂದಾಯಿಸಬೇಕು ಅಥವಾ ವಿಭಜನೆಯನ್ನು ನ್ಯಾಯಾಲಯದ ಡಿಕ್ರಿ ಮೂಲಕ ಪರಿಣಾಮಕಾರಿಯನ್ನಾಗಿಸತಕ್ಕದ್ದು ಎಂದು ಹೇಳಲಾಗಿದೆ.ಅಕ್ಷರಶಃ ಅರ್ಥೈಸುವುದಾದರೆ, ವಿವರಣಾ ಭಾಗವು,ದಿನಾಂಕ: 20.12.2004 ಕ್ಕೆ ಮುಂಚೆ ಕೈಗೊಂಡ ಎಲ್ಲಾ ನೈಜ ಮೌಖಿಕ ವಿಭಜನೆಗಳನ್ನು ಅಸಿಂಧುಗೊಳಿಸುತ್ತದೆ ಮತ್ತು ಅಂಥ ಸನ್ನಿವೇಶವು ವಿಭಜನೆಯನ್ನು ಪುನರಾರಂಭಿಸಲು ಕಾರಣವಾಗಬಹುದು ಮತ್ತು ಅಂಥ ಹಲವು ನಿದರ್ಶನಗಳು ಸಹ ಇವೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಪ್ರಕಾಶ್ ಮತ್ತು ಇತರರು ವಿರುದ್ಧ ಫಲವತಿ ಮತ್ತು ಇತರರು, ಮೊಕದ್ದಮೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ:

"22. ಈ ಹಿನ್ನೆಲೆಯಲ್ಲಿ, 6 ( 1) ನೇ ಪ್ರಕರಣದ ಪರಂತುಕ ಮತ್ತು 6 ನೇ ಪ್ರಕರಣದ ( 5) ನೇ ಉಪ-ಪ್ರಕರಣವ, ಸ್ಪಷ್ಟವಾಗಿ ವಿಧೇಯಕವನ್ನು ಮಂಡಿಸಿದ ದಿನಾಂಕವಾಗಿರುವ 20 ನೇ ಡಿಸೆಂಬರ್, 2004 ಕ್ಕೆ ಮೊದಲು ಕೈಗೊಂಡಿರಬಹುದಾದ ಅದರಲ್ಲಿ ಉಲ್ಲೇಖಿಸಿದ ವ್ಯವಹರಣೆಗಳನ್ನು ಹೊರತುಪಡಿಸಲು ಉದ್ದೇಶಿಸಿವೆ.ಜಾರಿಗೊಳಿಸಿದಾಗ ಸಿಂಧುವಾಗಿದ್ದ ವಿಭಜನೆಗಳನ್ನು ಪುನರಾರಂಭಿಸಲು ವಿವರಣೆಯು ಅನುಮತಿ ನೀಡುವುದಿಲ್ಲ.20 ನೇ ಡಿಸೆಂಬರ್, 2004 ಕ್ಕೆ ಮೊದಲಿನ ವ್ಯವಹರಣೆಗಳಿಗೆ ಅಂತಿಮತೆಯನ್ನು ನೀಡುವ ಉದ್ದೇಶ, ಯಾವುದೇ ರೀತಿಯಲ್ಲೂ ಮುಖ್ಯ ಉಪಬಂಧವನ್ನು ಪೂರ್ವಾನ್ವಯಗೊಳಿಸುವುದಲ್ಲ.ವಿಧೇಯಕವನ್ನು ಮಂಡಿಸಿದ ಸಮಯದಲ್ಲಿ ಲಭ್ಯವಿರುವ ಸ್ವತ್ತಿನ ನಕಲಿ ವ್ಯವಹರಣೆಗಳ ಮೂಲಕ ಅವುಗಳನ್ನು ತೆಗೆದುಕೊಳ್ಳದೆ, ಶಾಸನದ ಮೂಲಕ ಪ್ರದತ್ತವಾದ ಹಕ್ಕು ಲಭ್ಯವಾದಂತೆ ಮತ್ತು ಲಭ್ಯವಾದಾಗ, ಲಭ್ಯವಿರುವ ಉಳಿದ ಸ್ವತ್ತುಗಳನ್ನು ಲಭ್ಯವಾಗುವಂತೆ ಮಾಡುವುದು ಇದರ ಉದ್ದೇಶವಾಗಿದೆ ಮತ್ತು ಅದನ್ನು ಜಾರಿಗೊಳಿಸಬೇಕಾಗುತ್ತದೆ.6 ನೇ ಪ್ರಕರಣದ ( 1) ನೇ ಮತ್ತು ( 3) ನೇ ಉಪ-ಪ್ರಕರಣಗಳಲ್ಲಿನ ತಿದ್ದುಪಡಿಯ ಮುಖ್ಯ ಉಪಬಂಧವು, ಯಾವುದೇ ರೀತಿಯಲ್ಲೂ ಬಾಧಕಗೊಳಿಸಬೇಕೆಂದು ಉದ್ದೇಶಿಸಿರದೆ, ಈ ರೀತಿಯಲ್ಲಿ ಬಲಪಡಿಸುವ ಉದ್ದೇಶವನ್ನು ಹೊಂದಿದೆ.ಅಪೀಲುದಾರರು ಅವಲಂಬಿಸಿದಂಥ ವ್ಯವಹರಣೆಗಳನ್ನು ನಿಯಂತ್ರಿಸುವ ಇತ್ಯರ್ಥವಾದ ತತ್ವಗಳು, 20 ನೇ ಡಿಸೆಂಬರ್, 2004 ಕ್ಕೆ ಮೊದಲಿನ ಅವಧಿಗೆ ಪರಿಹರಿಸಿರಬೇಕೆಂದು ಉದ್ದೇಶಿಸಿಲ್ಲ.ಯಾವುದೇ ಸಂದರ್ಭದಲ್ಲೂ, 20 ನೇ ಡಿಸೆಂಬರ್, 2004 ರ ನಂತರ ಸಹ, ಶಾಸನಾತ್ಮಕ ಭಾವಿತ ವಿಭಜನೆಯನ್ನು ಪ್ರಶ್ನಿತ ವಿವರಣೆ ಅಥವಾ ಪರಂತುಕದ ಮೂಲಕ ರಕ್ಷಿಸಲಾಗುವುದಿಲ್ಲ.

23. ತದನುಸಾರವಾಗಿ, ತಿದ್ದುಪಡಿ ಮೇರೆಗಿನ ಹಕ್ಕುಗಳು, ಜೀವಂತ ಇರುವ ದಾಯಾದಿಗಳ ಜೀವಂತ ಇರುವ ಹೆಣ್ಣು ಮಕ್ಕಳು ಯಾವಾಗಲಾದರೂ ಜನಿಸಿರಲಿ, ಅದನ್ನು ಪರಿಗಣಿಸದೆ 9 ನೇ ಸೆಪ್ಟೆಂಬರ್, 2005 ರಂದು ಇದ್ದಂತೆ ಅವರಿಗೆ ಅನ್ವಯವಾಗುತ್ತವೆ.20 ನೇ ಡಿಸೆಂಬರ್, 2004 ಕ್ಕೆ ಮೊದಲು ಅನ್ವಯವಾಗುವ ಕಾನೂನಿಗೆ ಅನುಸಾರವಾಗಿ, ಸದರಿ ದಿನಾಂಕಕ್ಕೆ ಮುಂಚೆ ಕೈಗೊಂಡಿರಬಹುದಾದ ವಿಭಜನೆಗಳನ್ನು ಒಳಗೊ ಂ ಡು ವಿಲೇವಾರಿ ಅಥ ಪರ ಬಾರ್ ತ ಪರಿಣಾಮಕಾರಿಯಾಗದೆ ಉಳಿಯುವುದು._ಆ ತರುವಾಯ ಕಾರ್ಯರೂಪಕ್ಕೆ ಬಂದ ಯಾವುದೇ ವಿಭಜನೆಯ ವ್ಯವಹರಣೆಯು, ವಿವರಣೆಯಲ್ಲಿ ನಿರೂಪಿಸಿದಂತೆ ನಿಯಂತ್ರಿತವಾಗುತ್ತದೆ. "(ಒತ್ತು ನೀಡಲಾಗಿದೆ)

24. ಮೇಲಿನ ಚರ್ಚೆಯಿಂದ ಗ್ರಹಿಸಬಹುದಾದುದೆಂದರೆ, 6 ನೇ ಪ್ರಕರಣದ ( 5) ನೇ ಉಪ-ಪ್ರಕರಣದ ವಿವರಣೆಯು,ದಿನಾಂಕ: 20.12.2004 ಕ್ಕೆ ಮೊದಲು ಕಾರ್ಯಗತಗೊ ಂ ಡ ವಿಭಜನೆಯನ್ನು ನೋಂದಾಯಿಸಬೇಕೆ ಂ ದು ಅಗತ್ಯಪಡಿಸುತ್ತದೆಯಾದರೂ, ಸದರಿ ದಿನಾಂಕಕ್ಕೆ ಮೊದಲು ಕಾರ್ಯರೂಪಕ್ಕೆ ಬಂದ ಎಲ್ಲಾ ಸಿಂಧುವಾದ ಮೌಖಿಕ ವಿಭಜನೆಗಳು ಬಾಧಿತವಾಗದೆ ಉಳಿಯುತ್ತವೆ; ಆದರೆ, ಅಂಥ ಮೌಖಿಕ ವಿಭಜನೆಯನ್ನು ಸುಮ್ಮನೆ ಪರಿಗಣಿಸಲಾಗುವುದಿಲ್ಲ; ಮೌಖಿಕ ವಿಭಜನೆಯನ್ನು ಅವಲಂಬಿಸಿದ ಪಕ್ಷಕಾರನು ಅದನ್ನು ಕಡ್ಡಾಯವಾಗಿ ಸಾಬೀತುಪಡಿಸಬೇಕಾಗುತ್ತದೆ.ಸುಳ್ಳು ಮತ್ತು ನಕಲಿ ವಿಭಜನೆಯ ವ್ಯವಹರಣೆಗಳ ಸಾಧ್ಯತೆಯನ್ನು ತಳ್ಳಿಹಾಕುವ ಸಲುವಾಗಿ, ನ್ಯಾಯಾಲಯವು ಮೌಖಿಕ ವಿಭಜನೆಗೆ ಸಂಬಂಧಿಸಿದ ಸಾಕ್ಷ್ಯವನ್ನು ಅತ್ಯಂತ ಜಾಗರೂಕತೆಯಿಂದ ಪರಿಶೀಲಿಸಬೇಕಾಗುತ್ತದೆ.

25. ಪಿತ್ರಾರ್ಜಿತ ಹಿಂದು ಕೂಡು ಕುಟುಂಬದ ಸ್ವತ್ತಿಗೆ ಉತ್ತರಾಧಿಕಾರಿಯ ವಿಷಯದಲ್ಲಿ ದಾಯಾದಿಯಾಗಿ ಮಗಳ ಹಿತಾಸಕ್ತಿಯು ಪರಿಗಣನೆಗೆ ಉದ್ಭವಿಸಿದಾಗ ಮಾತ್ರವೇದಿನಾಂಕ: 20.12.2004 ರ ತಿದ್ದುಪಡಿಯ ಪ್ರಾಮುಖ್ಯತೆಯನ್ನು ಪರಿಭಾವಿಸಬೇಕೆಂಬುದು ಮತ್ತೊಂದು ಸಂಗತಿಯಾಗಿದೆ.ಹಿಂದು ಉತ್ತರಾಧಿಕಾರ

ಅಧಿನಿಯಮದ 6 ನೇ ಪ್ರಕರಣಕ್ಕೆ ಆದ ತಿದ್ದುಪಡಿಯಿಂದ ದಾಯಾದಿಯಾಗಿ ಮಗಳನ್ನು ಗುರುತಿಸುವುದು ಸಾಧ್ಯವಿರಬಹುದಾದರೂ,ದಿನಾಂಕ: 20.12.2004 ಕ್ಕೆ ಮೊದಲಿನ ಸ್ವತ್ತಿನ ವಿಲೇವಾರಿ ಅಥವಾ ವಿಭಜನೆಯ ದೃಷ್ಟಿಯಿಂದ ಸ್ವತ್ತಿನ ವಿಭಜನೆ ಕೋರಲು ಆಕೆಗೆ ಸಾಧ್ಯವಿರದಿರಬಹುದು.ಆದರೆ, ಸ್ವತ್ತಿನ ಉತ್ತರಾಧಿಕಾರಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಒಳಗೊಂಡಿರದೆ ಇದ್ದರೆ ಅಥವಾ ಆ ಪ್ರಶ್ನೆ ಉದ್ಭವಿಸದೆ ಇದ್ದರೆ, ಹಾಗೂ ಮೌಖಿಕ ಅಥವಾ ನೋಂದಣಿಯಾದ ವಿಭಜನೆಯನ್ನಾಧರಿಸಿದ ಸ್ವತ್ತಿನ ಸ್ವಾಮ್ಯಕ್ಕೆ ಸಂಬಂಧಿಸಿದ ಪ್ರಶ್ನೆಯಾಗಿದ್ದಲ್ಲಿ, ಅದರಲ್ಲಿ ಹಿಂದು ಉತ್ತರಾಧಿಕಾರ ಅಧಿನಿಯಮದ 6 ನೇ ಪ್ರಕರಣದಲ್ಲಿ ಗೊತ್ತುಪಡಿಸಿದ ದಿನಾಂಕದ ತಡೆಯ ಕಾರ್ಯಪಾತ್ರವೇನೂ ಇಲ್ಲ. ಆದುದರಿಂದ, ಎರಡನೇ ಪ್ರತಿವಾದಿ 1 ರಿಂದ 5 ರವರೆಗಿನ ಪ್ರತಿವಾದಿಗಳ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ನಾವು ಎತ್ತಿಹಿಡಿಯಲಾಗುವುದಿಲ್ಲ.

ವಾದಾಂಶಸಂಖ್ಯೆ: (i)

26. ಮೂಲ ದಾವೆಸಂಖ್ಯೆ: 54/2004 ನ್ನು 2 ನೇ ಪ್ರತಿವಾದಿ, ಎಂದರೆ ಇದರಲ್ಲಿನ ಅಪೀಲುದಾರರು ತನ್ನ ತಂದೆ, ತಾಯಿ, ಸಹೋದರ ಮತ್ತು ಸಹೋದರಿಯರ ವಿರುದ್ಧ ಸಲ್ಲಿಸಿದ್ದರು.ಈ ದಾವೆಯಲ್ಲಿ, ರೂಪಿಸಲಾದ ಆರು ವಿವಾದಾಂಶಗಳ ಪೈಕಿ, ( 1) ನೇ ಮತ್ತು ( 5) ನೇ ವಿವಾದಾಂಶಗಳನ್ನು ಇಲ್ಲಿ ಉದ್ಧರಿಸುವುದು ಅಗತ್ಯವಾಗಿದೆ:

"1. ವಾದಿ ಮತ್ತು 1 ನೇ ಪ್ರತಿವಾದಿಗಳ ನಡುವೆ ಆದ ವಿಭಜನೆಯಲ್ಲಿ, ದಾವಾ ಸ್ವತ್ತನ್ನು ಅವರಿಗೆ ಹಂಚಿಕೆ ಮಾಡಲಾಗಿದೆ, ದಾವೆಯ ದಿನಾಂಕದಂದು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಅವರು ನಿರುಪಾಧಿಕ ಮಾಲೀಕರಾಗಿದ್ದರು ಎಂಬುದನ್ನು ವಾದಿಯು ರುಜುವಾತುಪಡಿಸಿದ್ದಾನೆಯೇ?

5. 7 ನೇ ಮತ್ತು 8 ನೇ ಪ್ರತಿವಾದಿಗಳು, ದಾವಾ ಸ್ವತ್ತುಗಳಲ್ಲಿನ ತಮ್ಮ ಪಾಲಿಗೆ ಹಕ್ಕುಳ್ಳವರಾಗಿದ್ದಾರೆ ಎಂದು ಸಾಬೀತುಪಡಿಸಿರುವರೇ?"

27. ಮೂಲ ದಾವೆಸಂಖ್ಯೆ: 54/2004 ರಲ್ಲಿ, 7 ನೇ ಮತ್ತು 8 ನೇ ಪ್ರತಿವಾದಿಗಳು ಎರಡನೇ ಪ್ರತಿವಾದಿಯ ಇಬ್ಬರು ಸಹೋದರಿಯರಾಗಿದ್ದಾರೆ.2 ನೇ ಪ್ರತಿವಾದಿಯ ಸ್ವಾಮ್ಯದ ಘೋಷಣೆಯನ್ನು ಕ್ಲೇಮು ಮಾಡುವುದಕ್ಕಾಗಿ ಅವರು ಅವಲಂಬಿಸಿದ್ದಾರೆಂದು ಹೇಳಲಾದದಿನಾಂಕ: 29.06.2000 ದ ವಿಭಜನೆಯನ್ನು ವಿವಾದಗೊಳಿಸಿರುವುದಷ್ಟೇ ಅಲ್ಲದೆ, 1994 ನೇ ಸಾಲಿನ ಇನ್ನೂ ಮೊದಲಿನ ವಿಭಜನೆಯನ್ನು ಸಹ ಉಲ್ಲೇಖಿಸಿದ್ದು, ಅದರಲ್ಲಿ ಅವರ ಸಹೋದರ ಎಂದರೆ ಎರಡನೇ ಪ್ರತಿವಾದಿಗೆ 4 ಎಕರೆ 38 ಗುಂಟೆಗಳ ಜಮೀನನ್ನು ಮಾತ್ರ ಹಂಚಿಕೆ ಮಾಡಲಾಗಿತ್ತು ಮತ್ತು ಎಲ್ಲಾ ಹೆಣ್ಣು ಮಕ್ಕಳ (ವಾದಿಗಳ) ಪಾಲುಗಳನ್ನು ಅವರ ತಂದೆಯ ಹೆಸರಿನಲ್ಲಿ ಒಟ್ಟಿಗೆ ಇರಿಸಲಾಗಿತ್ತು.ಶೇಷಾಬಾಯಿ ಎಂಬ ಹೆಸರಿನ ಒಬ್ಬಳು ಸಹೋದರಿಯುದಿನಾಂಕ: 29.06.2000 ದ ಆರೋಪಿತ ವಿಭಜನೆಯ ಸಮಯದಲ್ಲಿ ಅಪ್ರಾಪ್ತಯಾಗಿದ್ದಳು ಎಂದು ಸಹ ಅವರು ಹೇಳಿದ್ದಾರೆ.

28. ಮೂಲ ದಾವೆ ದಾವೆಸಂಖ್ಯೆ: 54/2004 ಕುರಿತು ತೀರ್ಮಾನಿಸಿದ್ದಂಥ ಅಧಿವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು, 1 ನೇ ವಾದಾಂಶಕ್ಕೆ ಸಕಾರಾತ್ಮಕವಾಗಿ ಮತ್ತು 5 ನೇ ವಾದಾಂಶಕ್ಕೆ ನಕಾರಾತ್ಮಕವಾಗಿ ಉತ್ತರಿಸಿದ್ದಾರಾದರೂ, ವಿವಾದಗಳ ಮೇಲಿನ ಚರ್ಚೆಯು ವಿರೋಧಾತ್ಮಕ ನಿರ್ಣಯಗಳನ್ನು ಒಳಗೊಂಡಿದೆ ಮತ್ತು ತೀರ್ಪಿನ ಪ್ರಧಾನ ಭಾಗವು ಅತ್ಯಂತ ಗೊಂದಲದಿಂದ ಕೂಡಿದೆ.ಮೂಲ ದಾವೆಸಂಖ್ಯೆ: 54/2004 ರಲ್ಲಿನ ತೀರ್ಪು ಅನ್ಯಾಯದಿಂದ ಕೂಡಿದೆ ಎಂದು ಮಾತ್ರ ನಮ್ಮ ಅಭಿಪ್ರಾಯವನ್ನು ವ್ಯಕ್ತಿಪಡಿಸುತ್ತೇವೆ.1 ನೇ ವಾದಾಂಶಕ್ಕೆ ಸಕಾರಾತ್ಮಕವಾಗಿ ಮತ್ತು 5 ನೇ ವಾದಾಂಶಕ್ಕೆ ನಕಾರಾತ್ಮಕವಾಗಿ ಉತ್ತರಿಸಿರುವ ಅಧಿವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು, ಎರಡನೇ ಪ್ರತಿವಾದಿಯ ನಿರುಪಾಧಿಕ ಸ್ವಾಮ್ಯವನ್ನು ಘೋಷಿಸಿದ್ದಾರೆ; ಅವರ ಚರ್ಚೆಯಿ ಂ ದ,ದಿನಾಂಕ: 29.06.2000 ದ ವಿಭಜನೆಯನ್ನು ಸಾಬೀತುಪಡಿಸಲಾಗಿತ್ತಾದರೂ, 7 ನೇ ಮತ್ತು 8 ನೇ ಪ್ರತಿವಾದಿಗಳು (ಸಹೋದರಿಯರು) ಸ್ವತ್ತಿನಲ್ಲಿ ಪಾಲಿಗೆ ಹಕ್ಕುಳ್ಳವರಾಗಬೇಕೆಂದು ನಿರ್ಣಯಿಸಿದ್ದರೆಂಬುದು ತಿಳಿದುಬರುತ್ತದೆ.ವಿಭಜನೆಗಾಗಿ ಅಥವಾ ವಿಭಜನೆಯ ಪುನರಾರಂಭಕ್ಕೆ ಅವರು ಎದುರು ಕ್ಲೇಮನ್ನು ಮಾಡದೆ ಇದ್ದ ಕಾರಣದಿಂದ ಮತ್ತು ಅವರ ಪಾಲನ್ನು ಹಂಚಿಕೆ ಮಾಡುವ ಸಲುವಾಗಿ ಅವರು ನ್ಯಾಯಾಲಯ ಶುಲ್ಕವನ್ನು ಸಂದಾಯ ಮಾಡದೆ ಇದ್ದುದ್ದರಿಂದ, ಆ ದಾವೆಯ ವಾದಿಯು (ಅಪೀಲುದಾರರ) ಆತನ ಸಹೋದರಿಯರು ವಿಭಜನೆಯನ್ನು ಪುನರಾರಂಭಿಸುವವರೆಗೆ ವಾದಿಯ ಪಾಲಿನ ನಿರುಪಾಧಿಕ ಮಾಲೀಕರಾಗಿ ಮುಂದುವರಿಯುವರು ಎಂದು ಅಧಿವಿಚಾರಣಾ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.ತೀರ್ಪಿನ ಪ್ರಧಾನ ಭಾಗವನ್ನು ಇಲ್ಲಿ ಉದ್ಧರಿಸಲಾಗಿದೆ:

" ವಾದಿಯ ದಾವೆಯನ್ನು ಈ ಮೂಲಕ ಡಿಗ್ರಿಗೊಳಿಸಲಾಗಿದೆ.

ವೆಚ್ಚಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶಗಳಿರುವುದಿಲ್ಲ.

ವಾದಿಯು, 07 ಎಕರೆ 00 ಗುಂಟೆಗಳ ವಿಸ್ತೀರ್ಣದ ಅಳತೆಯ ಸರ್ವೆಸಂಖ್ಯೆ: 44 ರಲ್ಲಿರುವ ದಾವಾ ಜಮೀನಿನ ಮಾಲೀಕರಾಗಿ, 3 ರಿಂದ 5 ರವರೆಗಿನ ಮತ್ತು 7 ಮತ್ತು 8 ನೇ ಪ್ರತಿವಾದಿಗಳು ಪಡೆದ ಸಂಯೋಜಿತ ಡಿಗ್ರಿಗಳು ವಾದಿಗೆ ಬಂಧನಕಾರಿಯಲ್ಲವೆಂದು ಘೋಷಿಸುವ ಮೂಲಕ ನಿಶಾನೆ ಪಿ -22 ರಲ್ಲಿ ಗುರುತಿಸಲಾದ ವಿಭಜನಾ ಪತ್ರದ ಪುನರಾರಂಭದವರೆಗೆ (ಚಾಲ್ತಿಯಲ್ಲಿರುವವರೆಗೆ) ಮು ಂ ದುವರೆಯುತ್ತಾರೆ ಎಂದು ಘೋಷಿಸಲಾಗಿದೆ.

ಪ್ರತಿವಾದಿಗಳು, ಅವರ ಸೇವಕರು, ಏಜಂಟರು, ಸಂಬಂಧಿಕರು ಅಥವಾ ಅವರ ಅಧೀನದಲ್ಲಿ ಕ್ಲೇಮು ಮಾಡುವ ಯಾರೇ ವ್ಯಕ್ತಿಗಳನ್ನು, ವಾದಿಯ ದಾವಾ ಸ್ವತ್ತುಗಳ ಶಾಂತಿಯುತ ಸ್ವಾಧೀನ ಮತ್ತು ಅನುಭೋಗದಲ್ಲಿ ಹಸ್ತಕ್ಷೇಪ ಮಾಡುವುದರಿಂದ ಶಾಶ್ವತ ನಿರ್ಬಂಧಕಾಜ್ಞೆಯ ಮೂಲಕ ನಿರ್ಬಂಧಿಸಲಾಗಿದೆ.

ತದನುಸಾರವಾಗಿ ಡಿಕ್ರಿಯನ್ನು ಬರೆಯಲಾಗಿದೆ. "

29. ಹೀಗಾಗಿ, 1 ನೇ ಮತ್ತು 5 ನೇ ವಾದಾಂಶಗಳಿಗೆ ಕ್ರಮವಾಗಿ ಸಕಾರಾತ್ಮಕವಾಗಿ ಮತ್ತು ನಕಾರಾತ್ಮಕವಾಗಿ ಉತ್ತರಿಸಲಾಗಿತ್ತಾದ್ದಾಗ್ಯೂ, 2 ನೇ ಪ್ರತಿವಾದಿಗೆ ನೀಡಿದ ಘೋಷಣಾತ್ಮಕ ಪರಿಹಾರವು ಅತ್ಯಂತ ಸೀಮಿತ ಅವಧಿಗೆ, ವಾದಿಗಳು ವಿಭಜನೆಯನ್ನು ಪುನರಾರಂಭಿಸುವವರೆಗೆ ಮಾತ್ರ ಜಾರಿಯಲ್ಲಿತ್ತು.ಸದರಿ ತೀರ್ಪು ಎಷ್ಟೇ ಕೆಟ್ಟದ್ದಾಗಿದ್ದರೂ ಅದು 2 ನೇ ಪ್ರತಿವಾದಿಯತ್ತ ನೋಡುತ್ತದೆ; ಮತ್ತು ಅದು 7 0 ಎಕರೆಗಳ ಜಮೀನಿನಲ್ಲಿನ ಅವರ ಹಿತಾಸಕ್ತಿಗೆ ಬಾಧಕವಾಗಿದೆ.ಅವರು ಅತ್ಯಂತ ಬಾಧಿತ ಪಕ್ಷಾಕಾರ ಮತ್ತು ಮೇಲ್ಮನವಿಯನ್ನು ಸಲ್ಲಿಸುವ ಮೂಲಕ ಅವರು ಅದನ್ನು ಪ್ರಶ್ನಿಸದೇ ಇದ್ದಿದ್ದರೆ, ಸದರಿ ತೀರ್ಪಿನಲ್ಲಿನ ಪರಿಣಾಮಕ್ಕೆ ಅವರು ಬದ್ಧರಾಗುತ್ತಾರೆ.ಕಾನೂನುಬಾಹಿರವಾದ ತೀರ್ಪನ್ನು ಪ್ರಶ್ನಿಸುವ ಅಗತ್ಯವಿರಲಿಲ್ಲವೆಂದು 2 ನೇ ಪ್ರತಿವಾದಿಯು ಹೇಳಲಾಗುವುದಿಲ್ಲ.ವಾದಿಗಳು ಸದರಿ ತೀರ್ಪನ್ನು ಪ್ರಶ್ನಿಸಬೇಕಿತ್ತು ಎಂಬ ಎರಡನೇ ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ಒಪ್ಪಲಾಗುವುದಿಲ್ಲ.ಅವರು ಬಾಧಿತ ಪಕ್ಷಕಾರರಲ್ಲ, ಅದಕ್ಕಾಗಿ ಅವರಿಗೆ ವಿಭಜನೆಯನ್ನು ಪುನರಾರಂಭಿಸುವ ಸ್ವಾತಂತ್ರ್ಯ ನೀಡಲಾಗಿತ್ತು ಮತ್ತು ಅದರಿಂದಾಗಿ ಅವರು ಮತ್ತೊಂದು ದಾವೆಯನ್ನು ಹೂಡಿದ್ದು, ಅದರಲ್ಲಿನ ತೀರ್ಪು ಈ ಮೇಲ್ಮನವಿ ಸಲ್ಲಿಸಲು ಕಾರಣವಾಗಿದೆ.ಆದುದರಿಂದ,ದಿನಾಂಕ: 29.06.2000 ದ ವಿಭಜನಾ ಪತ್ರದಲ್ಲಿ ಎರಡನೆ ಪ್ರತಿವಾದಿಗೆ ಹಂಚಿಕೆ ಮಾಡಿದ ಪಾಲಿಗೆ ಅವರು ನಿರುಪಾಧಿಕ ಮಾಲೀಕರಾಗಿರುವರು ಎಂದು ಅವರು ವಾದಿಸಲಾಗುವುದಿಲ್ಲ ಎಂಬುದು ನಿರ್ಣಾಯಕವಾಗಿದೆ.

ವಾದಾಂಶಸಂಖ್ಯೆ:(iii) ಮತ್ತು(iv):

30. ಮೂಲ ದಾವೆಸಂಖ್ಯೆ: 54/2004 ರಲ್ಲಿನ 1 ನೇ ವಾದಾಂಶ ಕುರಿತು ನ್ಯಾಯಾಲಯದ ನಿರ್ಣಯಕ್ಕೆ ವಾದಿಗಳು ಬದ್ಧರಾಗಿದ್ದು, ಆ ನಿರ್ಣಯವನ್ನು ಪ್ರಶ್ನಿಸಲು ವಾದಿಗಳು ವಿಫಲವಾಗಿರುವುದರಿಂದ, ವಿಭಜನೆಗಾಗಿನ ದಾವೆಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ 11 ನೇ ಪ್ರಕರಣದ ಮತ್ತು 2 ನೇ ನಿಯಮದ II ನೇ ಕ್ರಮಾದೇಶದ ಮೂಲಕ ತಡೆಯಲಾಗಿದೆ ಮತ್ತು ಹಾಗಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 11 ನೇ ಪ್ರಕರಣವು ಅನ್ವಯವಾಗುತ್ತದೆ; ಅದೂ ಅಲ್ಲದೆ, ಸದರಿ ದಾವೆಯಲ್ಲಿ, ಅವರು ವಿಭಜನೆಗಾಗಿ ಎದುರು ಕ್ಲೇಮನ್ನು ಮಾಡಿರುವುದಿಲ್ಲ ಅಥವಾ ವಿಭಜನೆಗಾಗಿ ಹೊಸ ದಾವೆಯನ್ನು ಹೂಡಲು ನ್ಯಾಯಾಲಯದ ಅನುಮತಿಯನ್ನು ಕೇಳಿಲ್ಲವಾದ್ದರಿಂದ, ಸಿವಿಲ್ ಪ್ರಕ್ರಿಯಾ ಸಂಹಿತೆಯ 2 ನೇ ನಿಯಮದ II ನೇ ಕ್ರಮಾದೇಶವು ಅನ್ವಯವಾಗುವುದು ಎಂಬುದು 2 ನೇ ಪ್ರತಿವಾದಿ ಪರ ನ್ಯಾಯವಾದಿಗಳ ವಾದವಾಗಿತ್ತು.ಇದು ಕೇವಲ ನಿಷ್ಫಲವಾದ ವಾದವಾಗಿದೆ.ಸಿವಿಲ್ ಪ್ರಕ್ರಿಯಾ ಸಂಹಿತೆಯ 11 ನೇ ಪ್ರಕರಣವನ್ನು ಅನ್ವಯಿಸಿದರೆ, ಅದು, ಎರಡನೇ ಪ್ರತಿವಾದಿಯ ದಾವೆಯಲ್ಲಿ ತೀರ್ಪನ್ನು ಪ್ರಶ್ನಿಸಲು ವಿಫಲವಾದುದಕ್ಕೆ ಅವರ ವಿರುದ್ಧವಾಗಿದೆ.ವಾದಾಂಶಸಂಖ್ಯೆ:(ii) ಕ್ಕೆ ಉತ್ತರಿಸುವಾಗ ಈ ಅಂಶವನ್ನು ಈಗಾಗಲೇ ಚರ್ಚಿಸಲಾಗಿದೆ.ಮೂಲ ದಾವೆಸಂಖ್ಯೆ: 54/2004 ರಲ್ಲಿನ ತೀರ್ಪು, ವಾದಿಗಳ ವಿರುದ್ಧ ಪೂರ್ವ ನ್ಯಾಯನಿರ್ಣಯವಾಗಿ ಪರಿಣಾಮಕಾರಿಯಾಗುವುದಿಲ್ಲ.

31. ಸಿವಿಲ್ ಪ್ರಕ್ರಿಯಾ ಸಂಹಿತೆಯ 2 ನೇ ನಿಯಮದ II ನೇ ಕ್ರಮಾದೇಶದ ಅನ್ವಯತೆಗೆ ಸಂಬಂಧಿಸಿದಂತೆ, ಎದುರು ಕ್ಲೇಮು, ಪ್ರತಿವಾದಿಯು ನಿರ್ದಿಷ್ಟ ಸಂದರ್ಭಗಳಲ್ಲಿ ಹಕ್ಕುಳ್ಳವನಾಗಿರುವನೆಂಬ ಯಾವುದೇ ಪರಿಹಾರಗಳನ್ನು ಕೋರಲು ನೀಡಲಾಗಿರುವ ವಿಶೇಷ ಪ್ರಯೋಜನವಾಗಿದೆ ಎಂಬುದನ್ನು ನಾವು ಹೇಳಬೇಕಾಗಿದೆ.ಆತನು ಎದುರು ಕ್ಲೇಮನ್ನು ಪ್ರತಿಪಾದಿಸಬಹುದು ಅಥವಾ ಇಲ್ಲದಿರಬಹುದು.ಆತನು ಎದುರು ಕ್ಲೇಮನ್ನು ಕೋರಲು ಬದ್ಧನಾಗಿರುವುದಿಲ್ಲ, ಮತ್ತು ಎದುರು ಕ್ಲೇಮನ್ನು ಕೋರದಿದ್ದರೆ, ಆತನು ಅರ್ಹನಾಗಿರುವ ಯಾವುದೇ ಪರಿಹಾರಕ್ಕೆ ಆಗಲಿ ಪ್ರತ್ಯೇಕ ದಾವೆಯನ್ನು ಹೂಡುವುದರಿಂದ ಆತನನ್ನು ನಿರ್ಬಂಧಿಸುವುದಿಲ್ಲ.ಆದರೆ, ಎದುರು ಕ್ಲೇಮನ್ನು ಒಮ್ಮೆ ಎದುರುದಾರರನು ಕೋರಿದ್ದರೆ ಮತ್ತು ದಾವೆಯಲ್ಲಿ ವಾದಿಯ ವಿರುದ್ಧ ಆತನು ಹಕ್ಕುಳ್ಳವನಾಗಿದ್ದಾನೆಂಬ ಯಾವುದೇ ಪರಿಹಾರ ಕೋರುವುದನ್ನು ಆತನು ಬಿಟ್ಟು ಕೊಟ್ಟರೆ, ನ್ಯಾಯಾಲಯದ ಅನುಮತಿ ಕೋರದೆ ಆತನು ಬಿಟ್ಟುಕೊಟ್ಟ ಪರಿಹಾರಕ್ಕೆ ಹೊಸ ದಾವೆಯನ್ನು ಹೂಡಲಾಗುವುದಿಲ್ಲ.ಸಿವಿಲ್ ಪ್ರಕ್ರಿಯಾ ಸಂಹಿತೆಯ 2 ನೇ ನಿಯಮದ II ನೇ ಕ್ರಮಾದೇಶದಲ್ಲಿ ನಿರೂಪಿಸಿದ ತತ್ವವು ವಾದಿಗೆ ಅನ್ವಯಿಸುವಷ್ಟರಮಟ್ಟಿಗೆ ಪ್ರತಿವಾದಿಗೆ ಅನ್ವಯವಾಗುತ್ತದೆ.

ಪ್ರತಿವಾದಿಯು ಎದುರು ಕ್ಲೇಮು ಮಾಡಬಹುದಾಗಿದ್ದರೂ, ಅದಕ್ಕೆ ಮನವಿ ಮಾಡಿಕೊಳ್ಳದೆ ಇದ್ದರೆ, ಮತ್ತು ಅದಕ್ಕೆ ಬದಲಾಗಿ ಪ್ರತ್ಯೇಕ ದಾವೆಯನ್ನು ಹೂಡದಿದ್ದರೆ, ಸಿವಿಲ್ ಪ್ರಕ್ರಿಯಾ ಸಂಹಿತೆಯ 2 ನೇ ನಿಯಮದ II ನೇ ಕ್ರಮಾದೇಶವು ಚಿತ್ರಣಕ್ಕೆ ಬರುವುದಿಲ್ಲ.ಇದು ಕಾನೂನಿನ ನಿಲುವಾಗಿದ್ದು, ಪ್ರಸ್ತುತ ಮೊಕದ್ದಮೆಯಲ್ಲಿ, ವಾದಿಗಳ ದಾವೆಯು ಸಿವಿಲ್ ಪ್ರಕ್ರಿಯಾ ಸಂಹಿತೆಯ 2 ನೇ ನಿಯಮದ II ನೇ ಕ್ರಮಾದೇಶದಿಂದ, ಮೂಲದಾವೆಸಂಖ್ಯೆ: 54/2004 ರಲ್ಲಿ ಎದುರು ಕ್ಲೇಮು ಮಾಡದಿರುವ ಕಾರಣದಿಂದ ಬಾಧಿತವಾಗುವುದಿಲ್ಲ.ಈ ಎರಡು ವಾದಾಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

ವಾದಾಂಶಸಂಖ್ಯೆ: (   v)

32. ಪ್ರಸ್ತುತ ಮೊಕದ್ದಮೆಯಲ್ಲಿನ ವಿವಾದಗಳನ್ನು ಕುರಿತ ಚರ್ಚೆಯಿಂದ, ಮೂಲ ದಾವೆಸಂಖ್ಯೆ: 54/2004 ರಲ್ಲಿನ ತೀರ್ಪಿನ ಅಭಿಪ್ರಾಯದಲ್ಲಿ, ತಮ್ಮ ನ್ಯಾಯಸಮ್ಮತ ಪಾಲನ್ನು ಕ್ಲೇಮು ಮಾಡಲು ವಾದಿಗಳು ಹಕ್ಕುಳ್ಳವರಾಗಿರುವರೆಂದು ನಿರ್ಣಯಿಸಲಾಗಿದೆ ಎಂಬುದು ತಿಳಿದುಬರುತ್ತದೆ.ಅಧಿವಿಚಾರಣಾ ನ್ಯಾಯಾಲಯವು ದಾಖಲಿಸಿದ ನಿರ್ಣಯಗಳೊಂದಿಗೆ ನಾವು ಸಹಮತ ಹೊಂದಿದ್ದೇವೆ.ಪಾಲುಗಳನ್ನು ಸಂಯೋಜಿಸಿದಾಗ ಮಾತ್ರವೇ ವಿಭಜನೆಯ ಪುನರಾರಂಭಕ್ಕೆ ಅನುಮತಿಸಲಾಗುತ್ತದೆ ಎಂಬ 2 ನೇ ಪ್ರತಿವಾದಿ ಪರ ನ್ಯಾಯವಾದಿಗಳು ವಾದಿಸಿದ್ದಾರೆ.ವಿಭಜನೆಯ ಪುನರಾರಂಭಕ್ಕೆ ಇದು ಒಂದು ಕಾರಣವಾಗಬಹುದಾದರೂ, ಅದೇ ಸಮಯದಲ್ಲಿ, ಕೂಡು ಕುಟುಂಬದ ಯಾರೇ ಸದಸ್ಯರು ಸಿಂಧುವಾದ ಕಾರಣವಿಲ್ಲದೆ ಪಾಲನ್ನು ನಿರಾಕರಿಸಿದರೆ ಅಥವಾ ಅಸಮಾನ ವಿಭಜನೆಯಾಗಿದ್ದಲ್ಲಿ, ಖಂಡಿತವಾಗಿಯೂ ಅಂಥ ಸಂದರ್ಭಗಳಲ್ಲಿ ವಿಭಜನೆಯನ್ನು ಪುನರಾರಂಭಿಸಲು ಸಾಧ್ಯವಿದೆ.ಇಲ್ಲಿ ವಾದಿಗಳು, 2 ನೇ ಪ್ರತಿವಾದಿಗೆ ಅನುಗುಣವಾಗಿ ತಮ್ಮ ಪಾಲುಗಳನ್ನು ನಿರಾಕರಿಸಿದ್ದಾರೆ, ಸ್ವತ್ತಿನಲ್ಲಿನ ತಮ್ಮ ಪಾಲುಗಳ ಮೇಲಿನ ಹಕ್ಕನ್ನು ಅವರು ಬಿಟ್ಟುಕೊಟ್ಟಿದ್ದಾರೆ ಎಂಬುದಕ್ಕೆ ಯಾವುದೇ ಪುರಾವೆ ಇಲ್ಲ. ವಾದಿಗಳ ವಿವಾಹ ನೆರವೇರಿಸುವ ಹೊಣೆಗಾರಿಕೆಯನ್ನು ತಾನು ತೆಗೆದುಕೊಂಡಿದ್ದೆ ಎಂಬುದು 2ನೇ ಪ್ರತಿವಾದಿಯು ನೀಡಿದ ಇನ್ನೊಂದು ಕಾರಣವಾಗಿದ್ದು, ಅದನ್ನು ಸಹ ಸಾಬೀತುಪಡಿಸಿರುವುದಿಲ್ಲ. 2 ನೇ ಪ್ರತಿವಾದಿಯ ಸಹೋದರನಾಗಿರುವ ಗೋವಿಂದ ಹೆಸರಿನ 3 ನೇ ಪ್ರತಿವಾದಿಯು,ದಿನಾಂಕ: 29.06.2000 ದಂದು ಆದ ವಿಭಜನೆಯನ್ನು ಸಮರ್ಥಿಸಿರುವುದಿಲ್ಲ.ಆದುದರಿಂದ, ವಾದಿಗಳು ವಿಭಜನೆ ಕ್ಲೇಮು ಮಾಡಲು ಹಕ್ಕುಳ್ಳವರಾಗಿರುವರು ಮತ್ತು ದಾವೆಯನ್ನು ಡಿಗ್ರಿಗೊಳಿಸಲಾಗಿದೆ ಎಂದು ಅಧಿವಿಚಾರಣಾ ನ್ಯಾಯಾಲಯವು ತೀರ್ಮಾನಕ್ಕೆ ಬಂದಿರುವುದು ಸರಿಯಾಗಿಯೇ ಇದೆ ಎಂದು ನಾವು ನಿರ್ಣಯಿಸುತ್ತೇವೆ.ಪಶ್ನಿತ ತೀರ್ಪಿನಲ್ಲಿ ಹಸ್ತಕ್ಷೇಪ ಮಾಡಲು ನಮಗೆ ಯಾವುದೇ ಕಾರಣ ಕಂಡುಬರುತ್ತಿಲ್ಲ.ತದನುಸಾರವಾಗಿ, ಈ ಅಪೀಲನ್ನು ವೆಚ್ಚ ಸಹಿತವಾಗಿ ವಜಾಗೊಳಿಸಲಾಗಿದೆ.